# ಗಾಳ (ಲಾಂಗ್-ಲೈನ್) ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ

♦

# ಶಾರ್ಕ್ ಮೀನುಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ

♦

# ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ

Food and
Agriculture
Organization
of the United
Nations

# ಗಾಳ (ಲಾಂಗ್-ಲೈನ್) ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ

# ಶಾರ್ಕ್ ಮೀನುಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ

# ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ
ರೋಮ್, 1999

ಈ ಮಾಹಿತಿಯಲ್ಲಿ ಉಪಯೋಗಿಸಿರುವ ಹುದ್ದೆಗಳು ಮತ್ತು ವಿಷಯಗಳ ನಿರೂಪಣೆಯನ್ನು ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಆಹಾರ ಮತ್ತು ಕೃಷಿ ಸಂಸ್ಥೆಯು ಕಾನೂನಿನ್ವಯ ಅಥವಾ ಯಾವುದೇ ದೇಶದ, ಪ್ರದೇಶದ, ಪಟ್ಟಣದ ಅಥವಾ ಅದರ ಅಧಿಕಾರಿಗಳ ಅಥವಾ ಗಡಿನಿರ್ಧಾರಕ್ಕೆ ಸಂಬಂಧಿಸಿದ ಅಥವಾ ಗಡಿಯ ಅಭಿವೃದ್ಧಿ ಸ್ಥಿತಿಯನ್ನು ಸೂಚಿಸುವುದಿಲ್ಲ.

ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಈ ಪ್ರಕಟಣೆಯ ಯಾವುದೇ ಭಾಗವನ್ನು ಪುನರುತ್ಪಾದಿಸುವಂತಿಲ್ಲ, ಪುನ: ಮಾಡುವ ವ್ಯವಸ್ಥೆಯಲ್ಲಿ ಶೇಖರಿಸಿ ಇಡುವಂತಿಲ್ಲ ಅಥವಾ ಯಾವುದೇ ರೀತಿಯಲ್ಲಿ ಹರಡುವಂತಿಲ್ಲ ಅಥವಾ ಯಾವುದೇ ರೀತಿಯಲ್ಲಿ ಅಂದರೆ ವಿದ್ಯುನ್ಮಾನ, ಯಾಂತ್ರಿಕ, ಜೆರಾಕ್ಸ್ ಅಥವಾ ಕೃತಿಸ್ವಾಮ್ಯವನ್ನು ಮಾಲೀಕರ ಅನುಮತಿಯನ್ನು ಮುಂಚಿತವಾಗಿ ಪಡೆಯದ ವಿನ:ಹ ಮಾಡುವಂತಿಲ್ಲ. ಅಂತಹ ಅನುಮತಿಗೆ ಅರ್ಜಿಯನ್ನು ಯಾವ ಉದ್ದೇಶಕ್ಕಾಗಿ ಮಾಡಲಾಗಿದೆ ಮತ್ತು ಎಷ್ಟು ಮಾಹಿತಿಯನ್ನು ಪುನರುತ್ಪಾದಿಸ ಬೇಕಾಗಿದೆ ಎಂಬ ಮಾಹಿತಿಗಳನ್ನು ನಿರ್ದೇಶಕರು, ಮಾಹಿತಿ ವಿಭಾಗ, ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ, ವಯಲೇ ಡೆಲ್ಲೆ ಟರ್ಮೆ ಡಿ ಕರಕಲ್ಲಾ, 00100 ರೋಮ್, ಇಟಲಿ ಇವರಿಗೆ ಕಳುಹಿಸಿಕೊಡತಕ್ಕದ್ದು. (The Director, Food And Agriculture Organization of the United Nations, Viale delle Terme di Caracalla, 00100 Rome, Italy)

© FAO 1999

Translation: Suresh Kumar

*Translated and Printed by the Bay of Bengal Programme*
*Inter-Governmental Organisation*

*August 2016*

**Bay of Bengal Programme**
**Inter-Governmental Organisation**
91, Saint Marys Road, Abhiramapuram
Chennai - 600 018, Tamil Nadu, India
Tel: +91-44-24936294, 24936188; Fax: +91-44-24936102
Email: info@bobpigo.org; website: www.bobpigo.org

## ಈ ದಾಖಲೆಯ ತಯಾರಿ

ಈ ದಾಖಲೆಯು ಮೂರು ಅಂತರಾಷ್ಟ್ರೀಯ ಕ್ರಿಯಾ ಯೋಜನೆಗಳ ಪಠ್ಯಭಾಗಗಳನ್ನು ಒಳಗೊಂಡಿರುತ್ತದೆ.

– ಆಕಸ್ಮಿಕವಾಗಿ ದೊರೆಯುವ ಸಮುದ್ರ ಹಕ್ಕಿಗಳನ್ನು ಕಡಿಮೆಮಾಡುವ ಸಲುವಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ (IPOA)
– ಶಾರ್ಕ್‌ಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ (IPOA)
– ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ (IPOA)

ಅಂತರಾಷ್ಟ್ರೀಯ ಕ್ರಿಯಾ ಯೋಜನೆ (IPOA) ಯನ್ನು 1997 ರಲ್ಲಿ ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆಯ ಅನುಸರಣೆಯಲ್ಲಿದಂತೆ ಕೆಲವು ರೂಪದ ಅಂತರಾಷ್ಟ್ರೀಯ ಒಪ್ಪಂದಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಸೇರಿಸಿ ಮೀನುಗಾರಿಕಾ ಸಮಿತಿಯ COFI ಸದಸ್ಯರು ಇದು ಅಗತ್ಯವಿದೆಯೆಂದು ತಿಳಿದು ಅಭಿವೃದ್ಧಿ ಪಡಿಸಿರುತ್ತಾರೆ. ಪ್ರತೀ ಮೂರು ಸಮಸ್ಯೆಗಳಿಗೆ ಪ್ರತಿಯೊಂದಕ್ಕೆ ಅತ್ಯುತ್ತಮವಾಗಿ ಸೂಕ್ತವಾಗಿರುವ ಸಾಧನಗಳ ಸ್ವಯಂ ಅಂತರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಎಲ್ಲಾ ಸದಸ್ಯರ 1998 ರಲ್ಲಿ ಸಹಜವಾಗಿ ಜರಗಿದ ಎರಡು ಅಂತರ್–ಸರ್ಕಾರಿ ಸಭೆಯಲ್ಲಿ ಮೂರು ಪಠ್ಯಭಾಗಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಅಂತರಾಷ್ಟ್ರೀಯ ಕ್ರಿಯಾ ಯೋಜನೆ (IPOA) ಯನ್ನು ಫೆಬ್ರವರಿ 1999 ರಲ್ಲಿ ಜರಗಿದ ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಮೀನುಗಾರಿಕಾ ಸಮಿತಿಯ 23ನೇ ಅಧಿವೇಶನದಲ್ಲಿ ಅಳವಡಿಸಿಕೊಳ್ಳಲಾಗಿದೆ ಮತ್ತು 1999 ಜೂನ್ ತಿಂಗಳಲ್ಲಿ ನಡೆದ ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಮಂಡಳಿ ಸಭೆಯಲ್ಲಿ ಅನುಮೋದಿಸಲಾಗಿದೆ.

ಜಪಾನ್, ನಾರ್ವೆ, ಅಮೇರಿಕದ ಸಂಯುಕ್ತ ಸಂಸ್ಥಾನ ಇದರ ಸರ್ಕಾರಗಳು ಮತ್ತು ಯುರೋಪಿನ ಆಯೋಗವು ಅಂತರ್–ಸರ್ಕಾರಿ ಸಭೆಗಳಿಗೆ ಮತ್ತು ಹೆಚ್ಚಿನ ಪ್ರಾಥಮಿಕ ಚಟುವಟಿಕೆಗಳಿಗೆ ಆರ್ಥಿಕ ಸಹಾಯವನ್ನು ನೀಡಿರುತ್ತದೆ.

ಆಹಾರ ಮತ್ತು ಕೃಷಿ ಸಂಸ್ಥೆ

ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ. ಶಾರ್ಕ್ ಮೀನುಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ. ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ

ರೋಮ್, FAO. 1999. 44p


**ಸಾರಾಂಶ**

IPOA-SEABIRDS ಒಂದು ಸ್ವಯಂ ಪ್ರೇರಿತ ಉಪಕರಣವಾಗಿದ್ದು, ಯಾವ ದೇಶಗಳಲ್ಲಿ ಮೀನುಗಾರರು ಗಾಳ ಮೀನುಗಾರಿಕೆಯನ್ನು ಮಾಡುತ್ತಾರೋ ಅವರಿಗೆ ಇದು ಅನ್ವಯಿಸುತ್ತದೆ. ಈ ಪಠ್ಯಭಾಗವು ಅನುಷ್ಠಾನಗೊಳಿಸುವ ದೇಶಗಳು ಯಾವ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂಬ ಬಗ್ಗೆ ತಿಳಿಸುತ್ತದೆ. ಮತ್ತು ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳು ಅದರ ಗಾಳ ಮೀನುಗಾರಿಕೆಯಲ್ಲಿ ಹಿಡಿಯಲ್ಪಡುತ್ತದೆಯೋ ಎಂಬ ಸಮಸ್ಯೆಯನ್ನು ತಿಳಿದುಕೊಂಡು, ಗಾಳ ಮೀನುಗಾರಿಕೆಯಲ್ಲಿ ಸಮುದ್ರ ಹಕ್ಕಿಗಳನ್ನು ಆಕಸ್ಮಿಕವಾಗಿ ಹಿಡಿಯುವುದನ್ನು ಕಡಿಮೆ ಮಾಡುವ ಸಲುವಾಗಿ ರಾಷ್ಟ್ರೀಯ ಕ್ರಿಯಾ ಯೋಜನೆಯ (NPOA-SEABIRDS) ತಯಾರಿ ಮತ್ತು ಕಾರ್ಯವಿಧಾನಗಳ ಬಗ್ಗೆ ರಾಷ್ಟ್ರೀಯ ವಿಮರ್ಶೆ ಮತ್ತು ಬೇಕಾದ ವರದಿಗಳ ಅವಶ್ಯಕತೆಯ ಬಗ್ಗೆ ತಿಳಿಸಲಾಗಿದೆ. ಈ ಕುರಿತು ಕ್ರಮಗಳನ್ನು ಮುಖ್ಯವಾಗಿ ಯಾವ ಕ್ಯಾಲೆಂಡರ್ ವರ್ಷದಲ್ಲಿ ತೆಗೆದುಕೊಳ್ಳಬೇಕಾಗಿದೆ ಎಂಬ ಬಗ್ಗೆ ಕೂಡಾ ಮಾಹಿತಿಯನ್ನು ನೀಡಲಾಗಿದೆ.

**IPOA-SEABIRDS** ಯಾವ ದೇಶಗಳಲ್ಲಿ ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಸಮುದ್ರ ಹಕ್ಕಿಗಳು ಹಿಡಿಯಲ್ಪಡುವ ಸಮಸ್ಯೆ ಇದೆಯೆಂದು ತಿಳಿಯುತ್ತದೆಯೋ, ಅಂತಹ ದೇಶಗಳು ಅದರ ಬಗ್ಗೆ ಸೂಕ್ತ ತಗ್ಗಿಸುವಿಕೆಯ ಕ್ರಮಗಳ ಸಾರಾಂಶಗಳ ವಿವರಗಳನ್ನು ಅವರ NPOA-SEABIRDS ನಲ್ಲಿ ಅಳವಡಿಸಿಕೊಳ್ಳತಕ್ಕದ್ದು. ವಿವರಿಸಿರುವ ತಗ್ಗಿಸುವಿಕೆಯ ಕ್ರಮಗಳು ಈಗಾಗಲೇ ಉಪಯೋಗದಲ್ಲಿವೆ ಅಥವಾ ಬೆಳವಣಿಗೆಯ ಆರಂಭಿಕ ಹಂತಗಳಲ್ಲಿ ಇವೆ. ಉಲ್ಲೇಖಗಳ ಸೂಕ್ತ ದಾಖಲೆಗಳನ್ನು ನೀಡಲಾಗಿದೆ.

IPOA-SHARKS ಒಂದು ಸ್ವಯಂ ಪ್ರೇರಿತ ಉಪಕರಣವಾಗಿದ್ದು, ಯಾವ ದೇಶದ ಮೀನುಗಾರರು ಶಾರ್ಕ್ ಮೀನುಗಾರಿಕೆಯನ್ನು ಮಾಡುತ್ತಾರೋ ಅವರಿಗೆ ಇದು ಅನ್ವಯಿಸುತ್ತದೆ. ಈ ಪಠ್ಯಭಾಗವು ಅನುಷ್ಠಾನಗೊಳಿಸುವ ದೇಶಗಳು ಯಾವ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂದು ತಿಳಿಸುತ್ತದೆ. ಅಲ್ಲದೆ ಶಾರ್ಕ್ ಬಗ್ಗೆ ಸಮಸ್ಯೆಗಳು ಅಸ್ಥಿತ್ವದಲ್ಲಿವೆಯೋ ಎಂಬ ಮೌಲ್ಯಮಾಪನವನ್ನು ಮಾಡುವುದು ಮತ್ತು ಶಾರ್ಕ್ ಸಂರಕ್ಷಣೆ ಮತ್ತು ನಿರ್ವಹಣೆ ಸಲುವಾಗಿ ಬೇಕಾದ ರಾಷ್ಟ್ರೀಯ ಕ್ರಿಯಾ ಯೋಜನೆಯ (NPOA-SHARKS) ತಯಾರಿ ಮತ್ತು ಕಾರ್ಯವಿಧಾನಗಳ ಬಗ್ಗೆ ರಾಷ್ಟ್ರೀಯ ವಿಮರ್ಶೆ ಮತ್ತು ಬೇಕಾದ ವರದಿಗಳ ಅವಶ್ಯಕತೆ ಬಗ್ಗೆ ತಿಳಿಸಲಾಗಿದೆ. ಈ ಬಗ್ಗೆ ಕ್ರಮಗಳನ್ನು ಆದ್ಯತೆಯ ಮೇಲೆ ಯಾವ ಕ್ಯಾಲೆಂಡರ್ ವರ್ಷದಲ್ಲಿ ತೆಗೆದುಕೊಳ್ಳಬೇಕಾಗಿದೆ ಎಂಬ ಬಗ್ಗೆ ಕೂಡಾ ಮಾಹಿತಿಯನ್ನು ನೀಡಲಾಗಿದೆ.

IPOA-CAPACITY ಒಂದು ಸ್ವಯಂ ಪ್ರೇರಿತ ಉಪಕರಣವಾಗಿದ್ದು, ಯಾವ ದೇಶದ ಮೀನುಗಾರರು ಹಿಡುವಳಿ ಮಾಡುತ್ತಾರೋ ಅವರಿಗೆ ಇದು ಅನ್ವಯಿಸುತ್ತದೆ. ಪ್ರಥಮ ಭಾಗದ ಪಠ್ಯವು ಅಂತರಾಷ್ಟ್ರೀಯ ಕ್ರಿಯಾ ಯೋಜನೆಯ ಪ್ರಕೃತಿ ಮತ್ತು ವ್ಯಾಪ್ತಿ, ಎತ್ತಿ ತೋರಿಸುವ ತತ್ವಗಳನ್ನು ಮತ್ತು IPOA ಇದರ ವ್ಯಾಖ್ಯಾನವನ್ನು ಮಾಡಲಾಗಿದೆ ಮತ್ತು ಉದ್ದೇಶಗಳನ್ನು ತೋರಿಸಲಾಗಿದೆ. ಉಳಿದ ಪಠ್ಯವು ತುರ್ತು ಕ್ರಮದ ಬಗ್ಗೆ ವಿವರಣೆ ಮತ್ತು ಅನುಷ್ಠಾನವನ್ನು ಬೆಂಬಲಿಸಲು ಬೇಕಾದ ಸೂಕ್ತ ಕ್ರಮಗಳನ್ನು ತಿಳಿಸುತ್ತದೆ. ತುರ್ತು ಕ್ರಮಗಳು ಯಾವುವು ಎಂದರೆ ಮೀನುಗಾರಿಕಾ ಸಾಮರ್ಥ್ಯದ ಮೇಲಿನ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆ ಮತ್ತು ರಾಷ್ಟ್ರೀಯ ಯೋಜನೆಯ ತಯಾರಿಕೆ ಮತ್ತು ಅನುಷ್ಠಾನ ಸೇರಿವೆ. ಪಠ್ಯದಲ್ಲಿ ಅನುಷ್ಠಾನವನ್ನು ಬೆಂಬಲಿಸುವ ಕ್ರಮದ ಬಗ್ಗೆ *ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರ,* ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ *ವರದಿ ಮಾಡುವುದು* ಮತ್ತು *ಆಹಾರ ಮತ್ತು ಕೃಷಿ ಸಂಸ್ಥೆಯ ಪಾತ್ರ* ಸೇರಿರುತ್ತದೆ. ಈ ಬಗ್ಗೆ ಶಿಫಾರಸ್ಸು ಮಾಡಿದಲ್ಲಿ ಯಾವ ಕ್ಯಾಲೆಂಡರ್ ವರ್ಷದಲ್ಲಿ ಕ್ರಮಗಳನ್ನು ಪೂರ್ಣಗೊಳಿಸಬೇಕಾಗಿದೆ ಎಂದು ಕೂಡಾ ಗುರುತಿಸಲಾಗಿದೆ.

## ವಿಷಯಗಳು


| ವಿಷಯಗಳು | ಪುಟ ಸಂಖ್ಯೆ |
|---|---|
| ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಸಿಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ | 7 |
| ಶಾರ್ಕ್‌ಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ | 22 |
| ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ | 32 |

# ಗಾಳ (ಲಾಂಗ್‌-ಲೈನ್) ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ

**ಪರಿಚಯ:**

1. ಪ್ರಪಂಚದಲ್ಲಿ ವಿವಿಧ ರೀತಿಯಲ್ಲಿ ನಡೆಸುವ ವಾಣಿಜ್ಯ ಗಾಳ ಮೀನುಗಾರಿಕೆಯಲ್ಲಿ ಸಮುದ್ರ ಹಕ್ಕಿಗಳನ್ನು ಆಕಸ್ಮಿಕವಾಗಿ ಹಿಡಿಯಲಾಗುತ್ತದೆ. ಆಕಸ್ಮಿಕವಾಗಿ ಸಮುದ್ರ ಹಕ್ಕಿಗಳನ್ನು ಹಿಡಿಯುವ ಬಗ್ಗೆ ಹಾಗೂ ಆಕಸ್ಮಿಕವಾಗಿ ಹಿಡಿತದ ಪರಿಣಾಮದ ಬಗ್ಗೆ ಕಳವಳ ಹೆಚ್ಚಾಗಿರುತ್ತದೆ. ಸಮುದ್ರ ಹಕ್ಕಿಗಳನ್ನು ಆಕಸ್ಮಿಕವಾಗಿ ಹಿಡಿಯುವುದರಿಂದ ಮೀನಿನ ಉತ್ಪನ್ನದ ಮೇಲೆ ಹಾಗೂ ಮೀನುಗಾರಿಕೆಯ ಲಾಭದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿರುತ್ತದೆ. ಸರ್ಕಾರದ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ವಾಣಿಜ್ಯ ಮೀನುಗಾರಿಕಾ ಸಂಘ/ಸಂಸ್ಥೆಗಳು ಗಾಳ ಮೀನುಗಾರಿಕೆಯಲ್ಲಿ ಸಮುದ್ರ ಹಕ್ಕಿಗಳು ಆಕಸ್ಮಿಕವಾಗಿ ಮರಣ ಹೊಂದುವುದನ್ನು ಕಡಿಮೆ ಮಾಡುವ ಸಲುವಾಗಿ ಸೂಕ್ತ ಕ್ರಮ ಜರಗಿಸುವಂತೆ ಮನವಿ ಮಾಡಿ ಕೊಂಡಿರುತ್ತದೆ.

2. ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಸಮುದ್ರ ಹಕ್ಕಿಗಳು ಹಿಡಿಯಲ್ಪಡುವ ಮುಖ್ಯವಾದ ಮೀನುಗಾರಿಕೆಗಳೆಂದರೆ: ಕೇದಾರ್ ಮೀನು, ಖಡ್ಗ ಮೀನು, ಬಿಲ್ ಮೀನುಗಳು ಸಾಗರದ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ, ಪಟಗೀನಿಯನ್ ಟೂತ್ ಮೀನು ದಕ್ಷಿಣದ ಸಾಗರದಲ್ಲಿ ಹಾಗೂ ಹ್ಯಾಲಿಬೆಟ್, ಕಪ್ಪಗಿನ ಕಾಡ್ ಮೀನು, ಪೆಸೆಫಿಕ್ ಕಾಡ್ ಮೀನು, ಗ್ರೀನ್ ಲ್ಯಾಂಡಿನ ಹ್ಯಾಲಿಬಟ್, ಕಾಡ್ ಮೀನು, ಹಡ್ಡೋಕ್, ಟಸ್ಕ್ ಮತ್ತು ಲಿಂಗ್ ಉತ್ತರದ ಸಾಗರದಲ್ಲಿ (ಪೆಸೆಫಿಕ್ ಮತ್ತು ಅಟ್ಲಾಂಟಿಕ್‌ನಲ್ಲಿ) ಆಗಿದೆ. ಹೆಚ್ಚಾಗಿ ಹಿಡಿಯಲ್ಪಡುವ ಹಕ್ಕಿಗಳ ಪ್ರಭೇಧಗಳು ಯಾವುವು ಎಂದರೆ ಅಲ್ಬಟ್ರೋಸಸ್ ಮತ್ತು ಪೆಟ್ರೆಲ್ಸ್ ದಕ್ಷಿಣದ ಸಾಗರದಲ್ಲಿ, ಉತ್ತರದ ಫುಲ್‌ಮರಸ್ ಉತ್ತರದ ಅಟ್ಲಾಂಟಿಕ್ ಮತ್ತು ಅಲ್ಬಟ್ರೋಸಸ್, ಗಲ್ಸ್ ಮತ್ತು ಫುಲ್‌ಮರಸ್ ಉತ್ತರದ ಪೆಸೆಫಿಕ್ ಮೀನುಗಾರಿಕೆಯಲ್ಲಿ.

3. ದಕ್ಷಿಣದ ಸಾಗರದಲ್ಲಿ ವಾಣಿಜ್ಯ ಮೀನುಗಾರಿಕೆಯಿಂದ ಆಕಸ್ಮಿಕವಾಗಿ ಹಿಡಿಯುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಉದ್ದೇಶವನ್ನು ಗಮನದಲ್ಲಿಟ್ಟು ಕೊಂಡು ಅಂಟಾರ್ಕ್‌ಟಿಕ್ ಸಾಗರದ ಜೀವಂತ ಸಮುದ್ರ ಸಂಪೂನ್ಮೂಲಗಳ ಆಯೋಗ (CCAMLR) 1992 ರಲ್ಲಿ ತನ್ನ 23 ಸದಸ್ಯ ರಾಷ್ಟ್ರಗಳಿಗೆ ಆಕಸ್ಮಿಕವಾಗಿ ಹಿಡಿಯುವ ಸಮುದ್ರ ಹಕ್ಕಿಗಳ ಹಿಡಿತವನ್ನು ತಗ್ಗಿಸುವ ಬಗ್ಗೆ ಸೂಕ್ತ ಕ್ರಮಗಳನ್ನು ಜರಗಿಸುವಂತೆ ಸೂಚನೆಗಳನ್ನು ನೀಡಿತ್ತು.

4. 1994 ರಿಂದ ಆಸ್ಟ್ರೇಲಿಯ, ಜಪಾನ್ ಮತ್ತು ನ್ಯೂಜಿಲ್ಯಾಂಡ್ ರಾಷ್ಟ್ರಗಳನ್ನು ಒಳಗೊಂಡ ದಕ್ಷಿಣದ "ಬ್ಲೂ ಫಿನ್ ಟ್ಯೂನಾ ಸಂರಕ್ಷಣ ಆಯೋಗ" (CCSBT) ವು ದಕ್ಷಿಣದಲ್ಲಿ ಬ್ಲೂ ಫಿನ್ ಟ್ಯೂನಾ ಲಾಂಗ್-ಲೈನ್ ಮೀನುಗಾರಿಕೆಯಿಂದ ಆಕಸ್ಮಿಕವಾಗಿ ಸಮುದ್ರ ಹಕ್ಕಿಗಳಿಗೆ ಆಗುವ ತೊಂದರೆಗಳ ಬಗ್ಗೆ ಅಧ್ಯಯನ ಮಾಡಿ, ಅದನ್ನು ಕಡಿಮೆ ಮಾಡುವ ಕ್ರಮಗಳನ್ನು

ಹಾಗೂ 1995 ರಲ್ಲಿ "ಬ್ಲೂ ಫಿನ್ ಟ್ಯೂನಾ ಸಂರಕ್ಷಣಾ ಆಯೋಗ"ವ (CCSBT) ಪರಿಸರಯುಕ್ತವಾದ ಮೀನುಗಳ ಪ್ರಭೇದ ಅಂದರೆ ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಮರಣ ಹೊಂದುವ ಸಮುದ್ರ ಹಕ್ಕಿಗಳನ್ನು ಸೇರಿಸಿ, ಕಡಿಮೆ ಮಾಡುವ ಬಗ್ಗೆ ಶಿಫಾರಸ್ಸನ್ನು ಮಾಡಿತ್ತು. ಈ ಶಿಫಾರಸ್ಸು ಏನೆಂದರೆ ದತ್ತಾಂಶ ಮತ್ತು ಮಾಹಿತಿ ಸಂಗ್ರಹಿಸುವುದು, ತಗ್ಗಿಸುವಿಕೆಯ ಕ್ರಮಗಳು ಹಾಗೂ ಶಿಕ್ಷಣ ಮತ್ತು ಮಾಹಿತಿಯನ್ನು ಪ್ರಸರಣ ಮಾಡುವ ನೀತಿಯನ್ನು ಸಾರುತ್ತದೆ. ಅಲ್ಲದೆ "ಬ್ಲೂ ಫಿನ್ ಟ್ಯೂನಾ ಸಂರಕ್ಷಣ ಆಯೋಗ" ದ (CCSBT) ಎಲ್ಲಾ ಸದಸ್ಯ ರಾಷ್ಟ್ರಗಳು ಹಕ್ಕಿಗಳು ಹೆದರುವ ಲೈನ್‌ನನ್ನು (ಟೋರಿ ಪೋಲ್ಸ್‌ನ್ನು) ಉಪಯೋಗಿಸುವುದನ್ನು ಕಡ್ಡಾಯ ಮಾಡಿರುತ್ತದೆ.

5. ಅಮೇರಿಕಾ ದೇಶವು ಕೂಡಾ ತಳದಲ್ಲಿ ನಿರ್ವಹಿಸುವ ವಾಣಿಜ್ಯ ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ನಿಯಂತ್ರಣದ ಮೂಲಕ ಕ್ರಮಗಳನ್ನು ತೆಗೆದುಕೊಂಡಿದೆ. ಬೆರಿಂಗ್ ಸಮುದ್ರ/ಅಲೂಟಿಯನ್ ದ್ವೀಪಗಳು ಮತ್ತು ಅಲಸ್ಕಾ ಕೊಲ್ಲಿಯಲ್ಲಿ ಸಮುದ್ರ ಹಕ್ಕಿಗಳ ಸಂರಕ್ಷಣೆಯ ಸಲುವಾಗಿ 1997 ರಲ್ಲಿ ಹಾಗೂ 1998 ರಲ್ಲಿ ಹ್ಯಾಲಿಬೆಟ್ ಮೀನುಗಾರಿಕೆಯಲ್ಲಿ ಸಮುದ್ರ ಹಕ್ಕಿಗಳನ್ನು ನಿಯಂತ್ರಿಸುವ ಬಗ್ಗೆ ಸಮುದ್ರ ಹಕ್ಕಿಗಳ ಸಂರಕ್ಷಣಾ ಕ್ರಮಗಳನ್ನು ತೆಗೆದು ಕೊಂಡಿದೆ. ಅಮೇರಿಕಾ ರಾಷ್ಟ್ರವು ಹವಯ್ಯಾನ್ ಮೇಲ್ಭಾಗದ ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಪ್ರಸ್ತುತ ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿದೆ. ಅದೇ ರೀತಿ ಇತರ ಹಲವಾರು ರಾಷ್ಟ್ರಗಳು ಕೂಡಾ ಗಾಳ ಮೀನುಗಾರಿಕೆಯಲ್ಲಿ ಸಮುದ್ರ ಹಕ್ಕಿಗಳನ್ನು ಆಕಸ್ಮಿಕವಾಗಿ ಹಿಡಿಯುವುದನ್ನು ತಗ್ಗಿಸುವ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

**ಮೂಲ:**

6. ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳ ಬಗ್ಗೆ ಹೆಚ್ಚಿದ ಅರಿವು ಮತ್ತು ಅದರಿಂದ ಸಮುದ್ರ ಹಕ್ಕಿಗಳ ಮೇಲೆ ಆಗುವ ಸಂಭಾವ್ಯ ನಕರಾತ್ಮಕ ಪ್ರಭಾವಗಳನ್ನು ಗಮನದಲ್ಲಿಟ್ಟುಕೊಂಡು, ಮೀನುಗಾರಿಕಾ ಸಮಿತಿಯು (COFI) ಮಾರ್ಚ್ 1997 ರಲ್ಲಿ ನಡೆದ ತನ್ನ ಇಪ್ಪತ್ತೆರಡನೇ ಅಧಿವೇಶನದಲ್ಲಿ ಆಹಾರ ಮತ್ತು ಕೃಷಿ ಸಂಸ್ಥೆಯು (FAO) ಹೆಚ್ಚುವರಿ ಅನುದಾನವನ್ನು ಉಪಯೋಗಿಸಿಕೊಂಡು, ತಜ್ಞರ ಸಮಾಲೋಚನೆಯನ್ನು ನಡೆಸಿ, ಆಕಸ್ಮಿಕವಾಗಿ ಹಿಡಿಯುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಮಾರ್ಗಸೂಚಿಗಳನ್ನು ಅಭಿವೃದ್ಧಿಗೊಳಿಸಿ ಕ್ರಿಯಾ ಯೋಜನೆಯನ್ನು ಮುಂದಿನ ಅಧಿವೇಶನದಲ್ಲಿ ಸಲ್ಲಿಸುವಂತೆ ಸೂಚಿಸಿರುತ್ತದೆ.

7. *ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ* (IPOA-SEABIRDS)

ಯನ್ನು 25–27 ಮಾರ್ಚ್ 1998[1] ರಲ್ಲು ಟೋಕಿಯೋದಲ್ಲಿ ನಡೆದ ತಾಂತ್ರಿಕ ಸಮಿತಿ ಸಭೆಯಲ್ಲಿ ಮತ್ತು 26–30 ಅಕ್ಟೋಬರ್ 1998 ರಲ್ಲಿ ಟೋಕಿಯೋದಲ್ಲಿ ನಡೆದ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆ ಮೇಲೆ, ಶಾರ್ಕ್ ಮೀನುಗಾರಿಕೆ ಮತ್ತು ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳನ್ನು ಈ ಸಮಾಲೋಚನಾ ಸಭೆಯಲ್ಲಿ ಹಾಗೂ ರೋಮ್‌ನಲ್ಲಿ 22–24 ಜುಲಾಯಿ 1998[2] ರಲ್ಲಿ ನಡೆದ ಅದರ ಪ್ರಾಥಮಿಕ ಸಭೆಯಲ್ಲಿ ಅಭಿವೃದ್ಧಿ ಪಡಿಸಲಾಗಿದೆ.

## ಪ್ರಕೃತಿ ಮತ್ತು ವ್ಯಾಪ್ತಿ:

8. IPOA-SEABIRDS ಒಂದು ಸ್ವಯಂ ಪ್ರೇರಿತವಾಗಿದೆ. ಇದನ್ನು ವಿಸ್ತಾರವಾಗಿ ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆಯ ಕಲಮು ಸಂಖ್ಯೆ 2 (ಡಿ) ಇದರ ಚೌಕಟ್ಟಿನೊಳಗೆ ರಚಿಸಲಾಗಿದೆ. ನೀತಿ ಸಂಹಿತೆಯ ಕಲಮು ಸಂಖ್ಯೆ 3 ರಲ್ಲಿ ಕಲ್ಪಿಸಿರುವ ನಿಬಂಧನೆಗಳಲ್ಲಿ ಈ ದಾಖಲೆಯ ವ್ಯಾಖ್ಯಾನವನ್ನು, ಇದು ಯಾರಿಗೆ ಅನ್ವಯಿಸುತ್ತದೆ ಎಂಬುದನ್ನು ಮತ್ತು ಇತರ ಅಂತರಾಷ್ಟ್ರೀಯ ಸಾಧನಗಳ ಸಂಬಂಧವನ್ನು ತಿಳಿಸಲಾಗಿದೆ. ಎಲ್ಲಾ ಸಂಬಂಧಪಟ್ಟ ರಾಷ್ಟ್ರಗಳು[3] ಇದನ್ನು ಅನುಷ್ಠಾನಗೊಳಿಸುವಂತೆ ಉತ್ತೇಜನ ನೀಡಲಾಗಿದೆ.

9. IPOA-SEABIRDS ಇದು ಯಾವ ರಾಷ್ಟ್ರದ ನೀರಿನಲ್ಲಿ ಗಾಳ ಮೀನುಗಾರಿಕೆಯನ್ನು ಅವರ ಸ್ವಂತದ ಅಥವಾ ವಿದೇಶಿ ನೌಕೆಗಳ ಮೂಲಕ ಮಾಡಲಾಗುತ್ತದೆಯೋ ಮತ್ತು ಯಾವ ರಾಷ್ಟ್ರದ ನೀರಿನಲ್ಲಿ ಗಾಳ ಮೀನುಗಾರಿಕೆಯನ್ನು ಸಾಗರದಾಚೆಗೆ ಮಾಡಲಾಗುತ್ತದೆಯೋ ಮತ್ತು ಇತರ ರಾಷ್ಟ್ರಗಳ ಮೀಸಲು ಆರ್ಥಿಕ ವಲಯ (EEZ) ದಲ್ಲಿ ಮಾಡಲಾಗುತ್ತದೆಯೋ ಅದಕ್ಕೆ ಅನ್ವಯವಾಗುತ್ತದೆ.

## ಉದ್ದೇಶ:

10. ನೀತಿ ಸಂಹಿತೆಯ ಕಲಮು ಸಂಖ್ಯೆ 7.6.9 ಮತ್ತು 8.5 ರಲ್ಲಿ ನಮೂದಿಸಿದ ಉದ್ದೇಶ ಮತ್ತು IPOA-SEABIRDS ಇದರ ಉದ್ದೇಶವು ಕೂಡಾ ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವುದು ಆಗಿರುತ್ತದೆ.

---

1 "ಆಹಾರ ಮತ್ತು ಕೃಷಿ ಸಂಸ್ಥೆಯ ತಾಂತ್ರಿಕ ಸಮಿತಿ ಸಭೆಯು ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಬಗ್ಗೆ" 25–27 ಮಾರ್ಚ್ 1998 ರಲ್ಲಿ ಜಪಾನ್, ಟೋಕಿಯೋದಲ್ಲಿ ಜರಗಿದ ತಾಂತ್ರಿಕ ಸಮಿತಿ ಸಭೆಯ ವರದಿಯನ್ನು ನೋಡಿ. ಆಹಾರ ಮತ್ತು ಕೃಷಿ ಸಂಸ್ಥೆ ಇದರ ವರದಿ ಸಂಖ್ಯೆ. 584

2 "ಆಹಾರ ಮತ್ತು ಕೃಷಿ ಸಂಸ್ಥೆಯ ತಾಂತ್ರಿಕ ಸಮಿತಿ ಸಭೆಯು ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಬಗ್ಗೆ" 25–27 ಮಾರ್ಚ್ 1998 ರಲ್ಲಿ ಜಪಾನ್, ಟೋಕಿಯೋದಲ್ಲಿ ಜರಗಿದ ತಾಂತ್ರಿಕ ಸಮಿತಿ ಸಭೆಯ ವರದಿಯನ್ನು ನೋಡಿ. ಆಹಾರ ಮತ್ತು ಕೃಷಿ ಸಂಸ್ಥೆ ಇದರ ವರದಿ ಸಂಖ್ಯೆ. 584

3 "ಆಹಾರ ಮತ್ತು ಕೃಷಿ ಸಂಸ್ಥೆಯ ತಾಂತ್ರಿಕ ಸಮಿತಿ ಸಭೆಯು ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಬಗ್ಗೆ" 25–27 ಮಾರ್ಚ್ 1998 ರಲ್ಲಿ ಜಪಾನ್, ಟೋಕಿಯೋದಲ್ಲಿ ಜರಗಿದ ತಾಂತ್ರಿಕ ಸಮಿತಿ ಸಭೆಯ ವರದಿಯನ್ನು ನೋಡಿ. ಆಹಾರ ಮತ್ತು ಕೃಷಿ ಸಂಸ್ಥೆ ಇದರ ವರದಿ ಸಂಖ್ಯೆ. 584

**ಅನುಷ್ಠಾನ:**

11. IPOA-SEABIRDS ಇದನ್ನು ಅನುಷ್ಠಾನ ಮಾಡುವ ರಾಷ್ಟ್ರಗಳು ಕೆಲವೊಂದು ಚಟುವಟಿಕೆಗಳನ್ನು ಕೈಗೊಳ್ಳಬೇಕಾಗುತ್ತದೆ. ಇದನ್ನು ಸಂಬಂಧಿಸಿದ ಸೂಕ್ತ ಅಂತರಾಷ್ಟ್ರೀಯ ಸಂಸ್ಥೆಗಳ ಸಹಯೋಗದೊಂದಿಗೆ ಮಾಡಬೇಕಾಗಿದೆ. ನಿಖರವಾದ ಚಟುವಟಿಕೆಗಳ ಸ್ವರೂಪಗಳನ್ನು ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯುವ ಸಮುದ್ರ ಹಕ್ಕಿಗಳ ಮೌಲ್ಯಮಾಪನವನ್ನು ಆಧಾರವನ್ನಾಗಿಟ್ಟು ಕೊಂಡು ಮಾಡಬೇಕಾಗಿದೆ.

12. ಗಾಳ ಮೀನುಗಾರಿಕೆಯನ್ನು ಮಾಡುವ ರಾಷ್ಟ್ರಗಳು ಈ ಮೀನುಗಾರಿಕೆಯಲ್ಲಿ ಸಮುದ್ರ ಹಕ್ಕಿಗಳು ಆಕಸ್ಮಿಕವಾಗಿ ಹಿಡಿಯಲ್ಪಡುತ್ತಿದೆಯೋ ಎಂಬ ಸಮಸ್ಯೆಯನ್ನು ನಿರ್ಧರಿಸಲು ಮೌಲ್ಯಮಾಪನವನ್ನು ಮಾಡತಕ್ಕದ್ದು. ಈ ಸಮಸ್ಯೆಗಳು ಕಂಡುಬಂದಲ್ಲಿ ಅಂತಹ ರಾಷ್ಟ್ರಗಳು ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆಯನ್ನು (NPOA-SEABIRDS) ಅಳವಡಿಸಿ ಕೊಳ್ಳತಕ್ಕದ್ದು. (ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಅಭಿವೃದ್ಧಿ ಪಡಿಸಲಾದ ಕೆಳಗೆ ನಮೂದಿಸಿದ ರಾಷ್ಟ್ರೀಯ ತಾಂತ್ರಿಕ ಸೂಚನೆಗಳನ್ನು ನೋಡಿ). ಹೀಗೆ NPOA-SEABIRDS ನ್ನು ಅಭಿವೃದ್ದಿ ಪಡಿಸುವಾಗ ಪ್ರಾದೇಶಿಕ ನಿರ್ವಹಣಾ ಸಂಸ್ಥೆಗಳು ಗಳಿಸಿದ ಅನುಭವಗಳನ್ನು ಗಣನೆಗೆ ತೆಗೆದುಕೊಳ್ಳುವುದು ಸೂಕ್ತ. NPOA-SEABIRDS ನ್ನು ಅಭಿವೃದ್ಧಿ ಪಡಿಸುವಲ್ಲಿ ಆಹಾರ ಮತ್ತು ಕೃಷಿ ಸಂಸ್ಥೆಯು (FAO) ತಜ್ಞರ ಹೆಸರುಗಳ ತಖ್ತೆ ಮತ್ತು ತಾಂತ್ರಿಕ ಸಹಾಯವನ್ನು NPOA-SEABIRDS ನ್ನು ಅನುಷ್ಠಾನಗೊಳಿಸಲು ಎಲ್ಲಾ ರಾಷ್ಟ್ರಗಳಿಗೆ ನೀಡತಕ್ಕದ್ದು.

13. NPOA-SEABIRDS ನ ಅಗತ್ಯವಿಲ್ಲ ಎಂದು ನಿರ್ಧರಿಸುವ ರಾಷ್ಟ್ರಗಳು ಅದರ ನಿರ್ಧಾರವನ್ನು, ಆ ರಾಷ್ಟ್ರದ ಬದಲಾದ ಮೀನುಗಾರಿಕೆ ಅಂದರೆ ಈಗಿರುವ ಮೀನುಗಾರಿಕೆಯಲ್ಲಿ ವಿಸ್ತರಣೆ ಮತ್ತು/ಅಥವಾ ಹೊಸ ಗಾಳ ಮೀನುಗಾರಿಕೆಯನ್ನು ಅಭಿವೃದ್ಧಿ ಪಡಿಸಿದ್ದಲ್ಲಿ ನಿಯತವಾಗಿ ಮೌಲ್ಯಮಾಪನ ಮಾಡತಕ್ಕದ್ದು. ನಂತರದ ಮೌಲ್ಯಮಾಪನದಲ್ಲಿ ಆ ರಾಷ್ಟ್ರದಲ್ಲಿ ಯಾವುದಾದರೂ ಸಮಸ್ಯೆಗಳು ಕಂಡು ಬಂದಲ್ಲಿ ಅವರು ಕಂಡಿಕೆ 12 ರಲ್ಲಿ ತಿಳಿಸಿದ ಕಾರ್ಯವಿಧಾನಗಳಲ್ಲಿ ವಿವರಿಸಿರುವ ರೂಪರೇಶೆಗಳನ್ನು ಅನುಸರಿಸಬೇಕು ಮತ್ತು NPOA-SEABIRDS ನ್ನು ಎರಡು ವರ್ಷಗಳ ಒಳಗಾಗಿ ಅನುಷ್ಠಾನ ಮಾಡತಕ್ಕದ್ದು.

14. ಮೌಲ್ಯಮಾಪನವು ಆ ಸಂಬಂಧಪಟ್ಟ ರಾಷ್ಟ್ರದ NPOA-SEABIRDS ಇದರಲ್ಲಿ ಒಂದು ಭಾಗವಾಗಿ ಒಳಗೊಂಡಿರತಕ್ಕದ್ದು.

15. ಪ್ರತೀ ದೇಶವು NPOA-SEABIRDS ನ ವಿನ್ಯಾಸ, ಅನುಷ್ಠಾನಗೊಳಿಸುವುದು ಮತ್ತು ಅದರ ಮೇಲ್ವಿಚಾರಣೆಗೆ ಜವಾಬ್ದಾರಿಯಾಗಿರುತ್ತದೆ.

16. ಪ್ರತೀ ಗಾಳ ಮೀನುಗಾರಿಕೆಯು ಅನನ್ಯವಾಗಿದ್ದು, ಸಂಬಂಧಪಟ್ಟ ಮೀನುಗಾರಿಕೆಗೆ ಅನುಗುಣವಾಗಿ ಸ್ಥಳದಲ್ಲಿಯೇ ಮೌಲ್ಯಮಾಪನ ಮಾಡಿದ ನಂತರವೇ ಸೂಕ್ತ ತಗ್ಗಿಸುವಿಕೆಯ ಕ್ರಮಗಳನ್ನು ತೆಗೆದುಕೊಳ್ಳ ಬಹುದಾಗಿದೆಯೆಂದು ರಾಷ್ಟ್ರಗಳು ಗುರುತಿಸಿವೆ. ಆಕಸ್ಮಿಕವಾಗಿ ಹಿಡಿಯುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವಲ್ಲಿ ತಾಂತ್ರಿಕ ಮತ್ತು ತಗ್ಗಿಸುವಿಕೆಯ ಕಾರ್ಯಾಚರಣೆಯು ಲೈನ್ ಮೀನುಗಾರಿಕೆಯಲ್ಲಿ ಪ್ರಸ್ತುತ ಆಚರಣೆಯಲ್ಲಿದೆ ಅಥವಾ ಅಭಿವೃದ್ಧಿಗೊಳಿಸಲಾಗುತ್ತಿದೆ. ಬೇರೆ ಬೇರೆ ರಾಷ್ಟ್ರಗಳು ತೆಗೆದುಕೊಂಡ ತಾಂತ್ರಿಕ ಕ್ರಮಗಳ ಟಿಪ್ಪಣಿಯನ್ನು ಈ ದಾಖಲೆಗಳ ಅಂತ್ಯದಲ್ಲಿ ನೀಡಲಾಗಿದೆ. (ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಅಭಿವೃದ್ಧಿ ಪಡಿಸಲಾದ ರಾಷ್ಟ್ರೀಯ ತಾಂತ್ರಿಕ ಸೂಚನೆ). ಈ ತಖ್ತೆಯಲ್ಲಿರುವುದನ್ನು ಪೂರ್ವಾಗ್ರಹ ಪೀಡಿತವಾಗಿ ಯಾವುದೇ ರಾಷ್ಟ್ರವು ಇದರಲ್ಲಿ ಇರುವ ಕ್ರಮಗಳನ್ನು ಉಪಯೋಗಿಸುವುದನ್ನು ಅಥವಾ ಇತರ ಸೂಕ್ತ ಕ್ರಮಗಳನ್ನು ಅಭಿವೃದ್ದಿ ಪಡಿಸುವ ಹಕ್ಕನ್ನು ಹೊಂದಿರುತ್ತದೆ. ಪ್ರಸ್ತುತ ಉಪಯೋಗಿಸುತ್ತಿರುವ ತಗ್ಗಿಸುವಿಕೆಯ ಕ್ರಮಗಳ ಸಮಗ್ರ ವಿವರಣೆ ಮತ್ತು ಚರ್ಚೆಯನ್ನು ಅಥವಾ ಈಗ ಅಭಿವೃದ್ಧಿಗೊಳ್ಳುತ್ತಿರುವ ಕ್ರಮಗಳನ್ನು ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಮೀನುಗಾರಿಕಾ ಸುತ್ತೋಲೆ ಸಂಖ್ಯೆ 37 ರಲ್ಲಿ ನೋಡ ಬಹುದಾಗಿದೆ.

17. NPOA-SEABIRDS ಇದನ್ನು ಎಲ್ಲಾ ರಾಷ್ಟ್ರಗಳು ಮೀನುಗಾರಿಕಾ ಸಮಿತಿಯ COFI 2001 ರ ಅಧಿವೇಶನಕ್ಕೆ ಮುಂಚಿತವಾಗಿ ಅನುಷ್ಠಾನಗೊಳಿಸತಕ್ಕದ್ದು.

18. NPOA-SEABIRDS ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಆಯಾ ರಾಷ್ಟ್ರಗಳು ನಿಯತವಾಗಿ ಕನಿಷ್ಠ ನಾಲ್ಕು ವರ್ಷಗಳಿಗೆ ಒಂದು ಬಾರಿಯಾದರೂ NPOA-SEABIRDS ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ ವೆಚ್ಚ ಪರಿಣಾಮಕಾರಿ ವಿಧಾನವನ್ನು ಗುರುತಿಸತಕ್ಕದ್ದು.

19. ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಆಯಾ ರಾಷ್ಟ್ರಗಳು ಅವರ ಸಾಮರ್ಥ್ಯ ಹಾಗೂ ಸ್ಥಿರವಾದ ಅಂತರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ, ಪ್ರಾದೇಶಿಕ ಮತ್ತು ಉಪ–ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳ ಮೂಲಕ ಅಥವಾ ವ್ಯವಸ್ಥೆಗಳ ಮೂಲಕ ಮತ್ತು ಇನ್ನಿತರ ಸಹಕಾರದೊಂದಿಗೆ ಶ್ರಮಿಸಬೇಕು.

20. NPOA-SEABIRDS ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಆಯಾ ರಾಷ್ಟ್ರಗಳು ಈ ಸಮಸ್ಯೆಯನ್ನು ಜಾಗತಿಕ ವಿಷಯವಾಗಿ ಪರಿಗಣಿಸಿ, ಗಾಳ ಮೀನುಗಾರಿಕೆಯು ಮುಖ್ಯವಾಗಿರುವ ರಾಷ್ಟ್ರಗಳ ಅಗತ್ಯ ಸಹಕಾರವನ್ನು ಪಡೆಯುವುದು ಸೂಕ್ತವಾಗಿದೆ. ಈ ರಾಷ್ಟ್ರಗಳು ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಹಯೋಗದೊಂದಿಗೆ ಸಂಶೋಧನೆ, ತರಬೇತಿ ಮತ್ತು ಮಾಹಿತಿಯ ಉತ್ಪಾದನೆ ಮತ್ತು ಪ್ರಚಾರದ ವಸ್ತುಗಳಲ್ಲಿ ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ವ್ಯವಸ್ಥೆಗಳ ಮೂಲಕ ಶ್ರಮಿಸಬೇಕು.

21. NPOA-SEABIRDS ಇದರ ಮೌಲ್ಯಮಾಪನದ ಪ್ರಗತಿ, ಅಭಿವೃದ್ಧಿ ಮತ್ತು ಅನುಷ್ಠಾನದ ಬಗ್ಗೆ ಆಯಾ ರಾಷ್ಟ್ರಗಳು ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆಯ ಒಂದು ಭಾಗವಾಗಿ ಅದರ ಅರ್ಧ–ವಾರ್ಷಿಕ ವರದಿಯನ್ನು ಆಹಾರ ಮತ್ತು ಕೃಷಿ ಸಂಸ್ಥೆಗೆ (FAO) ಸಲ್ಲಿಸತಕ್ಕದ್ದು.

**ಆಹಾರ ಮತ್ತು ಕೃಷಿ ಸಂಸ್ಥೆ (FAO) ಇದರ ಪಾತ್ರ**

22. ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಮ್ಮೇಳನದಲ್ಲಿ ನಿರ್ದೇಶಿಸಿದಂತೆ ಮತ್ತು ತನ್ನ ಸಾಮಾನ್ಯ ಕಾರ್ಯಕ್ರಮದ ಚಟುವಟಿಕೆಗಳಡಿ IPOA-SEABIRDS ಯೋಜನೆಯ ಅನುಷ್ಠಾನದ ಬಗ್ಗೆ ಎಲ್ಲಾ ರಾಷ್ಟ್ರಗಳಿಗೆ ಸಹಾಯ ಮಾಡುವುದು.

23. ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಮ್ಮೇಳನದಲ್ಲಿ ನಿರ್ದೇಶಿಸಿದಂತೆ NPOA-SEABIRDS ಯೋಜನೆಯ ಅಭಿವೃದ್ಧಿ ಮತ್ತು ಅನುಷ್ಠಾನದ ಬಗ್ಗೆ ರಾಷ್ಟ್ರಗಳಿಗೆ ನಿರ್ದಿಷ್ಟ ಕಾರ್ಯಕ್ರಮದ ಮೂಲಕ, ರಾಷ್ಟ್ರದ ತಾಂತ್ರಿಕ ಸಹಾಯದ ಯೋಜನೆಗಳ ಮೂಲಕ, ತನ್ನ ಸಾಮಾನ್ಯ ಕಾರ್ಯಕ್ರಮಗಳ ನಿಧಿಯಿಂದ ಮತ್ತು ಸಂಸ್ಥೆಗೆ ಇಂತಹ ಉದ್ದೇಶಗಳಿಗಾಗಿ ಒದಗಿಸಿರುವ ಹೆಚ್ಚುವರಿ ಅನುದಾನದ ನಿಧಿಯಿಂದ ಸಹಾಯ ಮಾಡುತ್ತದೆ.

24. NPOA-SEABIRDS ನ ಅನುಷ್ಟಾನದ ಪ್ರಗತಿ ಬಗ್ಗೆ ಮೀನುಗಾರಿಕಾ ಸಮಿತಿಯ COFI ಮೂಲಕ ಅರ್ಧ–ವಾರ್ಷಿಕ ವರದಿಯನ್ನು ಪ್ರಟಿಸುತ್ತದೆ.

**ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲಾಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಅಭಿವೃದ್ಧಿ ಪಡಿಸಲು ತಾಂತ್ರಿಕ ಟಿಪ್ಪಣಿ.**

ಇದು ವಿಶೇಷವಾದ ಅಥವಾ ಅಗತ್ಯವಾಗಿ ಬೇಕಾದ ಸರ್ವವ್ಯಾಪ್ತಿ ಮಾಹಿತಿ ಆಗಿರುವುದಿಲ್ಲ. ಆದರೆ NPOA-SEABIRDS ಯೋಜನೆಯನ್ನು ತಯಾರಿಸುವಲ್ಲಿ ಮಾರ್ಗದರ್ಶನವನ್ನು ನೀಡುತ್ತದೆ.

NPOA-SEABIRDS ಇದು ಆಕಸ್ಮಿಕವಾಗಿ ಹಿಡಿಯುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಬಗ್ಗೆ ರಾಷ್ಟ್ರಗಳು ತಯಾರಿಸುವ ಯೋಜನೆಯಾಗಿದ್ದು, ಆ ರಾಷ್ಟ್ರದ ವಿನ್ಯಾಸ, ಅನುಷ್ಠಾನ ಮತ್ತು ಮೇಲ್ವಿಚಾರಣೆ ಆಗಿರುತ್ತದೆ.

**1. ಮೌಲ್ಯಮಾಪನ**

1. ಮೌಲ್ಯಮಾಪನದ ಉದ್ದೇಶವೇನೆಂದರೆ, ಎಲ್ಲಿ ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಸಮುದ್ರ ಹಕ್ಕಿಗಳು ಹಿಡಿಯಲ್ಪಡುತ್ತದೆಯೋ ಅದರ ವ್ಯಾಪ್ತಿ ಮತ್ತು ಪ್ರಕೃತಿಯನ್ನು ನಿರ್ಧರಿಸುವುದು.

2. ಮೌಲ್ಯಮಾಪನವು ಸಂಗ್ರಹ ಮತ್ತು ವಿಶ್ಲೇಷಣೆಯನ್ನು ಮಾತ್ರವಲ್ಲದೆ ಈ ಕೆಳಗಿನವುಗಳನ್ನು ಕೂಡಾ ಹೊಂದಿರುತ್ತದೆ.

- NPOA-SEABIRDS ನ ಅಗತ್ಯತೆ ಬಗ್ಗೆ ಮಾನದಂಡಗಳ ಉಪಯೋಗಿಸುವಿಕೆಯ ಮೌಲ್ಯಮಾಪನ ಮಾಡುವುದು.
- ಮೀನುಗಾರಿಕಾ ನೌಕೆಗಳ ದತ್ತಾಂಶ (ನೌಕೆಗಳ ಸಂಖ್ಯೆ ಮತ್ತು ಗಾತ್ರ)
- ಮೀನುಗಾರಿಕಾ ತಂತ್ರಗಳ ದತ್ತಾಂಶ (ತಳದ, ಮೇಲ್ಮಟ್ಟದ ವಿಧಾನಗಳು)
- ಮೀನುಗಾರಿಕಾ ಪ್ರದೇಶಗಳು
- ಗಾಳ ಮೀನುಗಾರಿಕೆಯಲ್ಲಿ ಮೀನುಗಾರಿಕಾ ಪ್ರಯತ್ನ (ಋತುಗಳು, ಜಾತಿಗಳು, ಹಿಡಿತ, ಗಾಳಗಳ ಸಂಖ್ಯೆ/ವಾರ್ಷಿಕ ಮೀನುಗಾರಿಕೆ)
- ಮೀನುಗಾರಿಕಾ ಪ್ರದೇಶಗಳಲ್ಲಿ ಸಮುದ್ರ ಹಕ್ಕಿಗಳ ಸಮುದಾಯದ ಸಾಂದ್ರತೆ (ಗೊತ್ತಿದ್ದಲ್ಲಿ)
- ವಾರ್ಷಿಕ ಸಮುದ್ರ ಹಕ್ಕಿಗಳ ಒಟ್ಟು ಹಿಡಿತ (ಪ್ರತೀ 1000 ಗಾಳಗಳ ಸೆಟ್‌ಗೆ/ಜಾತಿಗಳು/ಗಾಳ ಮೀನುಗಾರಿಕೆಯಿಂದ)
- ಪ್ರಸ್ತುತ ಉಪಯೋಗದಲ್ಲಿರುವ ತಗ್ಗಿಸುವ ಕ್ರಮಗಳು ಮತ್ತು ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವಲ್ಲಿ ಅದರ ಪರಿಣಾಮಕತ್ವ.
- ಆಕಸ್ಮಿಕವಾಗಿ ಹಿಡಿಲ್ಪಡುವ ಸಮುದ್ರ ಹಕ್ಕಿಗಳ ಮೇಲ್ವಿಚಾರಣೆ (ಗಮನಿಸುವ ಕಾರ್ಯಕ್ರಮಗಳು ಇತ್ಯಾದಿ)
- ಮೇಲಿನ ಎಲ್ಲಾ ವಿಷಯಗಳ ಸಾರಾಂಶದ ಪಟ್ಟಿ ಮತ್ತು NPOA-SEABIRDS ಗಳ ಅಭಿವೃದ್ಧಿ ಮತ್ತು ಅನುಷ್ಠಾನದ ಬಗ್ಗೆ ತೀರ್ಮಾನ.

## II. NPOA-SEABIRDS

NPOA-SEABIRDS ಈ ಕೆಳಗಿನ ಅಂಶಗಳನ್ನು ಹೊಂದಿರುತ್ತದೆ.

### 1. ತಗ್ಗಿಸುವಿಕೆಯ ಕ್ರಮಗಳ ಲಿಖಿತವಾದ ನಿಯಮಗಳು

NPOA-SEABIRDS ತಗ್ಗಿಸುವಿಕೆಯ ಸೂಕ್ತ ಕ್ರಮಗಳನ್ನು ನಿಗಧಿ ಪಡಿಸಬೇಕು. ಈ ಕಾರ್ಯಕ್ರಮಗಳ ಸಮರ್ಥತೆ ಸಾಬೀತಾಗಿರ ತಕ್ಕದ್ದು ಮತ್ತು ಮೀನುಗಾರಿಕೆ ಉದ್ಯಮದಲ್ಲಿ ವೆಚ್ಚ ಪರಿಣಾಮಕಾರಿಯಾಗಿರ ತಕ್ಕದ್ದು. ಪರಿಣಾಮಕಾರಿಯಾದ ತಗ್ಗಿಸುವಿಕೆಯ ಕ್ರಮಗಳನ್ನು ಸುಧಾರಿಸುವುದಿದ್ದಲ್ಲಿ ವಿವಿಧ ತಗ್ಗಿಸುವಿಕೆಯ ಕ್ರಮಗಳನ್ನು ಅಥವಾ ಸಾಧನಗಳನ್ನು ಒಗ್ಗೂಡಿಸ ಬಹುದಾಗಿದೆ. ಪ್ರತೀ ರಾಷ್ಟ್ರಗಳು ತಮಗೆ ಅನುಕೂಲಕರವಾದ ಬೇರೆ ಬೇರೆ ವಿಧಾನಗಳನ್ನು ತಮ್ಮಲ್ಲಿರುವ ನಿರ್ಧಿಷ್ಟವಾದ ಗಾಳ ಮೀನುಗಾರಿಕೆಗೆ ಅನ್ವಯವಾಗುವಂತೆ ನಿರ್ಧಿಷ್ಟವಾಗಿ ಸಂಧರ್ಭಕ್ಕನುಗುಣವಾಗಿ ಮಾಡಿಕೊಳ್ಳಬಹುದಾಗಿದೆ.

## 2. ಸಂಶೋಧನೆ ಮತ್ತು ಅಭಿವೃದ್ಧಿ

NPOA-SEABIRDS ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಹೊಂದಿರಬೇಕು ಮತ್ತು ಇವುಗಳನ್ನು ಒಳಗೊಂಡಿರುವ ಗುರಿ ಇರಬೇಕು. (i) ಅತ್ಯಂತ ಪ್ರಾಯೋಗಿಕವಾದ ಮತ್ತು ಸಮುದ್ರ ಹಕ್ಕಿಗಳ ನಿರೋಧಕವಾದ ಸಾಧನಗಳನ್ನು ಅಭಿವೃದ್ಧಿಗೊಳಿಸಬೇಕು. (ii) ಆಕಸ್ಮಿಕವಾಗಿ ಸಮುದ್ರ ಹಕ್ಕಿಗಳನ್ನು ಹಿಡಿಯುವುದನ್ನು ಕಡಿಮೆ ಮಾಡುವ ಇತರ ತಂತ್ರಜ್ಞಾನ ಮತ್ತು ಆಚರಣೆಗಳನ್ನು ಸುಧಾರಿಸತಕ್ಕದ್ದು ಮತ್ತು (iii) ಎಲ್ಲಿ ಈ ಸಮಸ್ಯೆಗಳು ಉದ್ಭವಿಸುತ್ತವೆಯೋ ಅಲ್ಲಿ ನಿರ್ಧಿಷ್ಟ ಸಂಶೋಧನೆಯನ್ನು ಕೈಗೊಂಡು, ಗಾಳ ಮೀನುಗಾರಿಕೆಯಲ್ಲಿ ಉಪಯೋಗಿಸುವ ತಗ್ಗಿವಿಸುವಿಕೆಯ ವಿಧಾನಗಳ ಪರಿಣಾಮದ ಮೌಲ್ಯಮಾಪನ ಮಾಡತಕ್ಕದ್ದು.

## 3. ಶಿಕ್ಷಣ, ತರಬೇತಿ ಮತ್ತು ಪ್ರಚಾರ

NPOA-SEABIRDS ಮೀನುಗಾರರಲ್ಲಿ, ಮೀನುಗಾರಿಕಾ ಸಂಘ/ಸಂಸ್ಥೆಗಳಲ್ಲಿ ಮತ್ತು ಇತರ ಸಂಬಂಧಪಟ್ಟ ಗುಂಪುಗಳಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಎಲ್ಲಿ ಇದು ಹಿಡಿಯಲ್ಪಡುತ್ತದೆಯೋ ಅಲ್ಲಿ ಅರಿವು ಮೂಡಿಸಲು ಶಿಫಾರಸ್ಸು ಮಾಡಬೇಕು. ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಬಗ್ಗೆ ಕ್ರಿಯಾ ಯೋಜನೆಯನ್ನು ಮತ್ತು ಇತರ ಮಾಹಿತಿಗಳನ್ನು ಮತ್ತು NPOA-SEABIRDS ಅನುಷ್ಠಾನವನ್ನು ರಾಷ್ಟ್ರೀಯ ಉದ್ಯಮಗಳಲ್ಲಿ, ಸಂಶೋಧನೆಯಲ್ಲಿ ಮತ್ತು ಅದರ ಸ್ವಂತ ಆಡಳಿತದಲ್ಲಿ ಪ್ರಚಾರ ಮಾಡಬೇಕು.

ಆಕಸ್ಮಿಕವಾಗಿ ಸಮುದ್ರ ಹಕ್ಕಿಗಳ ಹಿಡಿಯುವಿಕೆಯನ್ನು ಕಡಿಮೆ ಮಾಡುವ ಸಲುವಾಗಿ ತಾಂತ್ರಿಕ ಮಾಹಿತಿ ಹಾಗೂ ಈ ಬಗ್ಗೆ ಆರ್ಥಿಕ ಸಹಾಯದ ಮಾಹಿತಿಯನ್ನು ಒದಗಿಸುವುದು. ಮುಖ್ಯವಾಗಿ ವಿನ್ಯಾಸ, ಮೀನುಗಾರರಿಗಾಗಿ ಜನಸಮೂಹ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು, ಮೀನುಗಾರಿಕಾ ವ್ಯವಸ್ಥಾಪಕರು, ಬಲೆ ತಂತ್ರಜ್ಞರು, ಕಡಲವಾಸ್ತುಶಿಲ್ಪಿಗಳು, ನೌಕೆಗಳ ತಯಾರಕರು ಮತ್ತು ಸಂರಕ್ಷರು ಮತ್ತು ಇತರ ಆಸಕ್ತ ಸಾರ್ವಜನಿಕ ಸದಸ್ಯರನ್ನು ಯೋಜನೆಯಲ್ಲಿ ವಿವರಿಸತಕ್ಕದು. ಈ ಕಾರ್ಯಕ್ರಮಗಳು ಮುಖ್ಯವಾಗಿ ಆಕಸ್ಮಿಕವಾಗಿ ಹಿಡಿಯುವ ಸಮುದ್ರ ಹಕ್ಕಿಗಳನ್ನು ಮತ್ತು ಅದರ ತಗ್ಗಿಸುವಿಕೆಯನ್ನು ಅಳೆಯಲು ಇರುವ ಕಾರ್ಯಕ್ರಮ ಎಂದು ಅರ್ಥಮಾಡಿ ಕೊಡತಕ್ಕದ್ದು. ಜನಸಮೂಹ ಕಾರ್ಯಕ್ರಮಗಳು ಶಿಕ್ಷಣ ಪಾಠ, ವಿಡಿಯೋ, ಕೈಪಿಡಿ, ಸಣ್ಣ ಪುಸ್ತಕ ಮತ್ತು ಭಿತ್ತಿ ಪತ್ರಗಳನ್ನು ಒಳಗೊಂಡಿದ್ದು, ಮಾರ್ಗಸೂಚಿಗಳನ್ನು ಪ್ರಸಾರಗೊಳಿಸತಕ್ಕದು. ಕಾರ್ಯಕ್ರಮಗಳಲ್ಲಿ ಸಂರಕ್ಷಣಾ ವಿಷಯಗಳು ಮತ್ತು ಸಮುದ್ರ ಹಕ್ಕಿಗಳು ಗಾಳದ ಹುಳುಗಳನ್ನು ತೆಗೆದುಹಾಕುವುದನ್ನು ಕಡಿಮೆ ಮಾಡಿ ಮೀನುಗಾರಿಕಾ ಸಾಮರ್ಥ್ಯವನ್ನು ಹೆಚ್ಚಿಸಿ ಆರ್ಥಿಕ ಲಾಭವನ್ನು ಪಡೆಯುವುದು, ಈ ಎರಡೂ ವಿಷಯಗಳು ಇರತಕ್ಕದ್ದು.

## 4. ದತ್ತಾಂಶಗಳ ಸಂಗ್ರಹ

ದತ್ತಾಂಶಗಳನ್ನು ಸಂಗ್ರಹಿಸುವಾಗ ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳ ಬಗ್ಗೆ ಮತ್ತು ಅವುಗಳ ತಗ್ಗಿಸುವಿಕೆ ಬಗ್ಗೆ ವಿಶ್ವಾಸಾರ್ಹ ದತ್ತಾಂಶಗಳನ್ನು ಸಂಗ್ರಹಿಸುವುದು. ಇಂತಹ ಕಾರ್ಯಕ್ರಮಗಳಲ್ಲಿ ನೌಕೆಯಲ್ಲಿರುವವರನ್ನು ವೀಕ್ಷಕರನ್ನಾಗಿ ಉಪಯೋಗಿಸಿ ಕೊಳ್ಳಬಹುದಾಗಿದೆ.

# ಗಾಳ (ಲಾಂಗ್–ಲೈನ್) ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವ ಸಲುವಾಗಿ ಕೆಲವು ಐಚ್ಚಿಕ ತಾಂತ್ರಿಕ ಮತ್ತು ಕಾರ್ಯಚರಣೆಯ ಕಾರ್ಯಕ್ರಮದ ಬಗ್ಗೆ ತಾಂತ್ರಿಕ ಟಿಪ್ಪಣಿ

## 1. ಪರಿಚಯ

ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡಬೇಕಾದರೆ ಅಗತ್ಯವಾಗಿ ಸಮುದ್ರ ಹಕ್ಕಿಗಳ ಮತ್ತು ಹುಳುಗಳಿರುವ ಗಾಳಗಳ ಮಧ್ಯೆ ಜಟಾಪಟಿಯ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಈ ಎರಡನ್ನು ಒಟ್ಟಾಗಿ ಉಪಯೋಗಿಸಿದಲ್ಲಿ ಈ ಆಯ್ಕೆಯು ತಗ್ಗಿಸುವಿಕೆಯ ಪರಿಣಾಮವನ್ನು ಸುಧಾರಿಸಲು ಸಹಾಯವಾಗುವುದು.

ಪ್ರತಿಯೊಂದು ವಿಧಾನದ ಪರಿಣಾಮದ ಬಗ್ಗೆ ಮತ್ತು ಮೀನುಗಾರರಿಗೆ ತಗಲಬಹುದಾದ ವೆಚ್ಚವನ್ನು ಅಳೆಯಲು ಬೇಕಾದ ವಿವರವನ್ನು ಸಂಕ್ಷಿಪ್ತವಾಗಿ ಪ್ರಸ್ತುತ ಪಡಿಸಲಾಗಿದೆ. ಈ ಪ್ರಸ್ತುತಿಯಲ್ಲಿ "ಪರಿಣಾಮಕಾರಿತ್ವ" ವನ್ನು ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳನ್ನು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ಕಡಿಮೆ ಮಾಡಲಾಗಿದೆ ಮತ್ತು "ವೆಚ್ಚ" ಎಂದರೆ ಆರಂಭಿಕ ವೆಚ್ಚ ಅಥವಾ ಬಂಡವಾಳ ವೆಚ್ಚ ಮತ್ತು ಇತರ ನಡೆಯುತ್ತಿರುವ ಕಾರ್ಯಾಚರಣೆಗಳ ವೆಚ್ಚ ಎಂದು ವ್ಯಾಖ್ಯಾನಿಸಲಾಗಿದೆ.

ಇತರ ತಾಂತ್ರಿಕ ಆಯ್ಕೆಗಳು ಪ್ರಸ್ತುತ ಅಭಿವೃದ್ದಿಯಲ್ಲಿವೆ ಅಲ್ಲದೆ ಆ ಕ್ಷೇತ್ರದಲ್ಲಿರುವ ಮೀನುಗಾರರು ಮತ್ತು ಸಂಶೋಧಕರು ಹೊಸತಾಗಿ ತಗ್ಗಿಸುವಿಕೆಯ ಸೂಕ್ತ ಕ್ರಮಗಳನ್ನು ಅಭಿವೃದ್ದಿ ಪಡಿಸಬಹುದು ಮತ್ತು ಇದರಿಂದ ಮುಂಬರುವ ದಿನಗಳಲ್ಲಿ ಸೂಕ್ತ ಕ್ರಮಗಳು ತಖ್ತೆಯಲ್ಲಿ ಹೆಚ್ಚಾಗುವ ಸಾಧ್ಯತೆ ಇದೆ.

ಬೇರೆ ಬೇರೆ ತಗ್ಗಿಸುವಿಕೆಯ ಕ್ರಮಗಳನ್ನು ಒಟ್ಟುಮಾಡಿ ಅಥವಾ ಸಾಧನಗಳನ್ನು ಉಪಯೋಗಿಸಿ ಸುಧಾರಿಸ ಬಹುದಾಗಿದೆ. ಪ್ರತೀ ರಾಷ್ಟ್ರವು ಅವರವರ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಮತ್ತು ಅವರ ನಿರ್ಧಿಷ್ಟವಾದ ಗಾಳ ಮೀನುಗಾರಿಕೆಗೆ ಅನ್ವಯವಾಗುವ ತಗ್ಗಿಸುವಿಕೆಯ ಕ್ರಮಗಳನ್ನು ಅಭಿವೃದ್ದಿ ಪಡಿಸಬಹುದಾಗಿದೆ.

ಕೆಳಗೆ ನೀಡಲಾದ ತಖ್ತೆಯನ್ನು ಕಡ್ಡಾಯ ಅಥವಾ ಸಮಗ್ರ ಎಂದು ಪರಿಗಣಿಸಲಾಗದು ಇದು ಆಹಾರ ಮತ್ತು ಕೃಷಿ ಸಂಸ್ಥೆಯು (FAO) ತಗ್ಗಿಸುವಿಕೆ ಬಗ್ಗೆ ತೆಗೆದುಕೊಂಡ ಕ್ರಮಗಳ ಮತ್ತು ಪ್ರಸ್ತುತ ಅಭಿವೃದ್ದಿಗೊಳ್ಳುತ್ತಿರುವ ಕ್ರಮಗಳ ಮೂಲ ಮಾಹಿತಿ ಆಗಿರುತ್ತದೆ.

II **ತಾಂತ್ರಿಕ ಕ್ರಮಗಳು**

**1. ಗಾಳದ ಹುಳುಗಳು** (bait) **ಮುಳುಗುವ ವೇಗವನ್ನು ಹೆಚ್ಚು ಮಾಡುವುದು.**

ಅ) **ಗಾಳದ ಸಲಕರಣೆಗಳನ್ನು ಭಾರ ಮಾಡುವುದು.**

*ಪರಿಕಲ್ಪನೆ:* ಗಾಳದ ಹುಳುಗಳು ಮುಳುಗುವ ವೇಗವನ್ನು ಹೆಚ್ಚು ಮಾಡುವುದು ಮತ್ತು ಇದರಿಂದ ಸಮುದ್ರ ಹಕ್ಕಿಗಳಿಗೆ ಸಿಗುವ ಸಮಯವನ್ನು ಕಡಿಮೆ ಮಾಡುವುದು.

*ಪರಿಣಾಮಕತ್ವ:* ಸಮುದ್ರ ಹಕ್ಕಿಗಳಿಂದ ಗಾಳದ ಹುಳುಗಳನ್ನು ಕಳೆದುಕೊಳ್ಳುವುದನ್ನು, ಲೈನ್‌ನಿನ ತೂಕವನ್ನು ಹೆಚ್ಚು ಮಾಡುವುದರಿಂದ ಮಾಡಬಹುದೆಂದು ಅಧ್ಯಯನಗಳು ತಿಳಿಸುತ್ತವೆ.

*ವೆಚ್ಚ:* ಆರಂಭಿಕ ವೆಚ್ಚವು ತೂಕದ ಸಾಮಾಗ್ರಿಗಳು (ತೂಕವಿರುವ ಸಲಕರಣೆಗಳು ಅಥವಾ ಭಾರಗಳು) ಮತ್ತು ಮೀನುಗಾರಿಕೆ ಮಾಡುವ ಸಮಯದಲ್ಲಿ ಕಳೆದು ಹೋಗುವ ಭಾರಗಳನ್ನು ಬದಲಾಯಿಸುವುದು ಆಗಿರುತ್ತದೆ.

ಬ) **ಗಾಳದ ಹುಳುಗಳನ್ನು ನೀರಾಗಿಸುವಂತೆ ಕರಗಿಸುವುದು:**

*ಪರಿಕಲ್ಪನೆ:* ಗಾಳದ ಹುಳುಗಳು ತೇಲುವುದನ್ನು ಕಡಿಮೆ ಮಾಡಲು ಗಾಳದ ಹುಳುಗಳಲ್ಲಿ ಇರುವ ಮಂಜುಗಡ್ಡೆಯನ್ನು ಕರಗಿಸಬೇಕು ಮತ್ತು / ಅಥವಾ ತೇಲುತ್ತಿರುವ ಮೂತ್ರಕೋಶಗಳನ್ನು ತೂತು ಮಾಡಬೇಕು.

*ಪರಿಣಾಮಕತ್ವ:* ಗಾಳದ ಹುಳುಗಳನ್ನು ನೀರಾಗಿಸುವಂತೆ ಕರಗಿಸುವುದರಿಂದ ಆಕಸ್ಮಿಕವಾಗಿ ಹಿಡಿಯುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡಬಹುದಾಗಿದೆ. ಚಪ್ಪಟೆಯಾಗಿರುವ ಮೂತ್ರಕೋಶಗಳನ್ನು ಹೊಂದಿರುವ ಗಾಳದಹುಳುಗಳ ಮೀನುಗಳು ತ್ವರಿತವಾಗಿ ಮುಳುಗುತ್ತದೆ ಎಂದು ಹೇಳಲಾಗಿದೆ.

*ವೆಚ್ಚ:* ಗಾಳದ ಹುಳುಗಳನ್ನು ನೀರಾಗಿ ಕರಗಿಸಲು ಬೇಕಾಗುವ ಅಥವಾ ತೇಲುವ ಮೂತ್ರಕೋಶಗಳನ್ನು ಸರಿದೂಗಿಸಲು ಹೆಚ್ಚುವರಿ ಭಾರದ ಸಾಮಾಗ್ರಿಗಳನ್ನು ಉಪಯೋಗಿಸಲು ಬೇಕಾಗುವ ವೆಚ್ಚ.

ಕ) **ಲೈನ್ ಜೋಡಣೆ ಯಂತ್ರ**

*ಪರಿಕಲ್ಪನೆ:* ಲೈನ್‌ನಿನ ಮೇಲಿನ ಒತ್ತಡವನ್ನು ಲೈನ್ ಸಲಕರಣೆಗಳನ್ನು ತಯಾರಿಸುವಾಗ ಕಡಿಮೆ ಮಾಡುವುದು ಮತ್ತು ಇದರಿಂದ ಲೈನ್ ಮುಳುಗುವ ಪ್ರಮಾಣವನ್ನು ಹೆಚ್ಚಿಸುವುದು.

*ಪರಿಣಾಮಕತ್ವ:* ಈ ಕುರಿತು ಪರಿಮಾಣಾತ್ಮಕ ಮೌಲ್ಯಮಾಪನವನ್ನು ಮಾಡದೇ ಇದ್ದರೂ ಕೂಡಾ ಈ ಅಭ್ಯಾಸದಿಂದ ಲೈನ್ ವೇಗವಾಗಿ ಮುಳುಗುವುದರಿಂದ, ಗಾಳಕ್ಕೆ ಅಳವಡಿಸುವ ಹುಳುಗಳು ಸಮುದ್ರ ಹಕ್ಕಿಗಳಿಗೆ ಸಿಗುವುದು ಕಡಿಮೆಯಾಗುತ್ತದೆ.

*ವೆಚ್ಚ:* ಕೆಲವು ಮೀನುಗಾರಿಕೆಗೆ ಲೈನ್–ಜೋಡಣೆ ಮಾಡುವ ಸಾಧನಗಳ ಸಲುವಾಗಿ ಪ್ರಾರಂಭಿಕ ವೆಚ್ಚ ತಗಲಬಹುದು.

**2. ನೀರಿನ ತಳಭಾಗದಲ್ಲಿ ಗಾಳಿಕೊಡೆ, ಪೊರೆಯ ಚೀಲ ಅಥವಾ ಕೊಳವೆಯನ್ನು ಅಳವಡಿಸುವುದು.**

*ಪರಿಕಲ್ಪನೆ:* ನೀರಿನ ತಳಭಾಗದಲ್ಲಿ ಲೈನ್‌ನನ್ನು ಬಿಡುವುದರಿಂದ ಸಮುದ್ರ ಹಕ್ಕಿಗಳಿಗೆ ಗಾಳದ ಹುಳುಗಳು ಸಿಗದಂತೆ ಮಾಡುವುದು.

*ಪರಿಣಾಮಕತ್ವ:* ನೀರಿನ ತಳಭಾಗದಲ್ಲಿ ಜೋಡಣೆ ಮಾಡುವ ಉಪಕರಣಗಳು ಇನ್ನೂ ಅಭಿವೃದ್ಧಿ ಹಂತದಲ್ಲಿದೆ. ಅದರೂ ಅವುಗಳು ತುಂಬಾ ಪರಿಣಾಮಕಾರಿಯಾಗಿರುತ್ತವೆ ಎಂದು ನಂಬಲಾಗಿದೆ.

*ವೆಚ್ಚ:* ನೀರಿನ ತಳದಲ್ಲಿ ಜೋಡಣೆ ಮಾಡಲು ಉಪಯೋಗಿಸುವ ಉಪಕರಣದ ಪ್ರಾರಂಭಿಕ ವೆಚ್ಚ.

**3. ಹಕ್ಕಿಗಳನ್ನು ಹೆದರಿಸುವ ಲೈನ್‌ನನ್ನು ಮೇಲೆ ಅಥವಾ ಹುಳುಗಳಿರುವ ಗಾಳ ಎಲ್ಲಿ ನೀರನ್ನು ಪ್ರವೇಶಿಸುತ್ತವೆಯೋ ಅಲ್ಲಿ ಜೋಡಿಸುವುದು.**

*ಪರಿಕಲ್ಪನೆ:* ಹುಳುಗಳಿರುವ ಗಾಳ ಎಲ್ಲಿ ನೀರನ್ನು ಪ್ರವೇಶಿಸುತ್ತವೆಯೋ ಅಲ್ಲಿ ಸಮುದ್ರ ಹಕ್ಕಿಗಳು ಪ್ರವೇಶಿಸುವುದನ್ನು ತಡೆಯುವುದು. ಹಕ್ಕಿಗಳನ್ನು ಹೆದರಿಸುವ ಲೈನ್‌ನನ್ನು ಹೇಗೆ ವಿನ್ಯಾಸ ಮಾಡಲಾಗಿದೆ ಎಂದರೆ, ಗಾಳದ ಹುಳುಗಳನ್ನು ಎಲ್ಲಿ ಹಕ್ಕಿಗಳು ಹಿಡಿಯುತ್ತದೆಯೋ ಅಲ್ಲಿ ಅವುಗಳ ಪ್ರವೇಶವನ್ನು ತಡೆಯಲಾಗುತ್ತದೆ. ವಿನ್ಯಾಸದ ವಿವರಣೆಯು ನೌಕೆಗಳು, ಮೀನುಗಾರಿಕಾ ಕಾರ್ಯಾಚರಣೆ ಮತ್ತು ಮೀನುಗಾರಿಕೆ ಮಾಡುವ ಪ್ರದೇಶಗಳು ಇವುಗಳ ಮೇಲೆ ಅವಲಂಭಿಸಿರುತ್ತವೆ. ಸ್ಟ್ರೀಮರ್ ಲೈನ್‌ಗಳು ಮತ್ತು ಎಳೆಯುವ ಬಾಯ್‌ಗಳು ಈ ತಂತ್ರಕ್ಕೆ ಉದಾರಣೆಗಳಾಗಿವೆ.

*ಪರಿಣಾಮಕತ್ವ:* ಕೆಲವು ಅಧ್ಯಯನಗಳಲ್ಲಿ ಮತ್ತು ಉಪಾಖ್ಯಾನಗಳಲ್ಲಿ ಈ ಸಾಧನಗಳ ಸರಿಯಾದ ವಿನ್ಯಾಸ ಮತ್ತು ಅದನ್ನು ಸರಿಯಾಗಿ ಉಪಯೋಗಿಸಿದಲ್ಲಿ ಆಗುವ ಗಮನಾರ್ಹ ಪರಿಣಾಮವನ್ನು ಪ್ರದರ್ಶಿಸಲಾಗಿದೆ.

*ವೆಚ್ಚ:* ಸಮುದ್ರ ಹಕ್ಕಿಗಳನ್ನು ಹೆದರಿಸುವ ಲೈನ್‌ಗಳಿಗೆ ಪ್ರಾರಂಭಿಕ ವೆಚ್ಚ ಕಡಿಮೆ ಇರುತ್ತದೆ.

**4. ಗಾಳದ ಹುಳುಗಳನ್ನು ಎರಕಮಾಡುವ ಯಂತ್ರ**

*ಪರಿಕಲ್ಪನೆ:* ಗಾಳದ ಹುಳುಗಳನ್ನು ಹಕ್ಕಿಗಳನ್ನು ಹೆದರಿಸುವ ಲೈನ್‌ನಲ್ಲಿ ಇಡುವುದು ಮತ್ತು ನೌಕೆಯ ಪ್ರೊಪೆಲರ್‌ನ ಪ್ರಕ್ಷುಬ್ದದಿಂದ ಮತ್ತು ನೌಕೆಗಳು ಏಳುವ ಜಾಗದಿಂದ ಗಾಳದ ಹುಳುಗಳನ್ನು ಹೊರಗಿಡುವುದು.

*ಪರಿಣಾಮಕತ್ವ:* ಗಾಳದ ಹುಳುಗಳನ್ನು ರಕ್ಷಣಾ ವಲಯದಲ್ಲಿ ಹಕ್ಕಿಗಳನ್ನು ಹೆದರಿಸುವ ಲೈನ್‌ನಿಂದ ಹೊರಗೆ ನಿಯೋಜಿಸುವುದರಿಂದ, ಗಾಳದ ಹುಳುಗಳು ಸಮುದ್ರ ಹಕ್ಕಿಗಳಿಗೆ ಸಿಗುವುದನ್ನು ಕಡಿಮೆ ಮಾಡ ಬಹುದಾಗಿದೆ. ಎರಕ ಮಾಡುವ ಯಂತ್ರಗಳನ್ನು ಹಕ್ಕಿಗಳನ್ನು ಹೆದರಿಸುವ ಲೈನ್ ಉಪಯೋಗಿಸಿ ಅಥವಾ ಗಾಳದ ಹುಳುಗಳು ಹಕ್ಕಿಗಳನ್ನು ಹೆದರಿಸುವ ಲೈನ್ ಇಲ್ಲದೆಯೇ ಎಷ್ಟರ ಮಟ್ಟಿಗೆ ಉಪಯೋಗವಾಗಿದೆ ಎಂಬುದನ್ನು ಇನ್ನೂ ನಿರ್ಧರಿಸಲಾಗಿಲ್ಲ.

*ವೆಚ್ಚ:* ಗಾಳದ–ಹುಳುಗಳ ಎರಕ ಮಾಡುವ ಯಂತ್ರವನ್ನು ಖರೀದಿಸಲು ಪ್ರಾರಂಭಿಕ ವೆಚ್ಚ ಹೆಚ್ಚು ಬರಬಹುದು.

## 5. ಹಕ್ಕಿಗಳನ್ನು ಹೆದರಿಸುವ ಪರದೆ

*ಪರಿಕಲ್ಪನೆ:* ಹಕ್ಕಿಗಳನ್ನು ಹೆದರಿಸುವ ಪರದೆಗಳನ್ನು ಉಪಯೋಗಿಸಿ ಗಾಳಗಳನ್ನು ಎಳೆಯುವ ಸಂದರ್ಭದಲ್ಲಿ ಹಕ್ಕಿಗಳು ಗಾಳದಲ್ಲಿರುವ ಹುಳುಗಳನ್ನು ತೆಗೆದುಕೊಂಡು ಹೋಗದಂತೆ ಹಿಮ್ಮೆಟ್ಟಿಸುವುದು.

*ಪರಿಣಾಮಕತ್ವ:* ಹಕ್ಕಿಗಳನ್ನು ಹೆದರಿಸುವ ಪರದೆಗಳು, ಹಕ್ಕಿಗಳು ಗಾಳದ ಹುಳುಗಳನ್ನು ಕಿತ್ತೊಗೆಯುವುದನ್ನು ವಿರೋಧಿಸುತ್ತವೆ ಎಂದು ಕೆಲವು ಉಪಾಖ್ಯಾನಗಳಲ್ಲಿ ಸಾಕ್ಷಿ ಇವೆ.

*ವೆಚ್ಚ:* ಇದರ ಸಾಮಾಗ್ರಿಗಳ ವೆಚ್ಚ ಕಡಿಮೆ ಇರುತ್ತದೆ.

## 6. ಕೃತಕವಾದ ಗಾಳದ ಹುಳುಗಳು

*ಪರಿಕಲ್ಪನೆ:* ಸ್ವಾದಿಷ್ಟತೆಯನ್ನು ಅಥವಾ ಗಾಳದ ಹುಳುಗಳ ಲಭ್ಯತೆಯನ್ನು ಕಡಿಮೆ ಮಾಡುವುದು

*ಪರಿಣಾಮಕತ್ವ:* ಹೊಸತಾಗಿ ಕೃತಕವಾದ ಗಾಳದ ಹುಳುಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗಿದೆಯಾದುದರಿಂದ ಅದರ ಪರಿಣಾಮದ ಬಗ್ಗೆ ಇನ್ನು ತಿಳಿಯಬೇಕಾಗಿದೆ.

*ವೆಚ್ಚ:* ಪ್ರಸ್ತುತ ತಿಳಿದಿರುವುದಿಲ್ಲ.

## 7. ಗಾಳದ ಮಾದರಿಯ ಬದಲಾವಣೆ:

*ಪರಿಕಲ್ಪನೆ:* ಹಕ್ಕಿಗಳು ಗಾಳದ ಹುಳುಗಳನ್ನು ಹಿಡಿಯಲು ಪ್ರಯತ್ನಿಸುವಾಗ ಅದು ಗಾಳಕ್ಕೆ ಸಿಕ್ಕಿ ಹಾಕಿಕೊಳ್ಳುವ ಸಂಭವನೀಯತೆಯನ್ನು ಕಡಿಮೆ ಮಾಡುವ ಸಲುವಾಗಿ ಗಾಳದ ಮಾದರಿಯನ್ನು ಸೂಕ್ತವಾಗಿ ಬದಲಾಯಿಸುವುದು.

*ಪರಿಣಾಮ:* ಗಾಳಗಳ ಗಾತ್ರ ಬಹುಶ: ಆಕಸ್ಮಿಕವಾಗಿ ಸಿಕ್ಕಿಹಾಕಿಕೊಳ್ಳುವ ಸಮುದ್ರ ಹಕ್ಕಿಗಳ ಜಾತಿಯ ಸಂಯೋಜನೆ ಮೇಲೆ ಪರಣಾಮ ಬೀರಬಹುದು. ಗಾಳಗಳ ಬದಲಾವಣೆಯ ಮೇಲಿನ ಪರಿಣಾಮ ಸರಿಯಾಗಿ ತಿಳಿದಿರುವುದಿಲ್ಲ.

*ವೆಚ್ಚ:* ತಿಳಿದಿರುವುದಿಲ್ಲ.

## 8. ಶ್ರವಣೇಂದ್ರಿಯ ನಿರೋಧಕ

*ಪರಿಕಲ್ಪನೆ:* ಶ್ರವಣೇಂದ್ರೀಯ ಸಂಕೇತಗಳನ್ನು ಅಂದರೆ ಹೆಚ್ಚಿನ ಪುನಾರಾವರ್ತನೆ, ಪೇಚಾಡಿಸುವ ಕರೆಗಳನ್ನು ಮಾಡಿ ಹಕ್ಕಿಗಳು ಬರದಂತೆ ನಿರೋಧಿಸುವುದು.

*ಪರಿಣಾಮಕತ್ವ*: ಕಡಿಮೆ ಪರಿಣಾಮಕಾರಿಯಾಗ ಬಹುದು, ಯಾಕೆಂದರೆ ಹಿನ್ನೆಲೆ ಶಬ್ದಗಳು ಜೋರಾಗಿದ್ದರೂ ಕೂಡಾ ಹಕ್ಕಿಗಳು ಅಂತಹ ಯಾವುದೇ ಶಬ್ದಗಳನ್ನು ರೂಡಿ ಮಾಡಿಕೊಳ್ಳುವುದು ಸಾಮಾನ್ಯ.

*ವೆಚ್ಚ:* ತಿಳಿದಿರುವುದಿಲ್ಲ.

## 9. ನೀರಿನ ಫಿರಂಗಿ:

*ಪರಿಕಲ್ಪನೆ:* ಅತಿಯಾದ ನೀರಿನ ಒತ್ತಡವನ್ನು ಉಪಯೋಗಿಸಿ ಹುಳುಗಳು ಇರುವ ಗಾಳವನ್ನು ಬಚ್ಚಿಡುವುದು.

*ಪರಿಣಾಮಕತ್ವ*: ಈ ವಿಧಾನದ ಪರಿಣಾಮದ ಬಗ್ಗೆ ಯಾವುದೇ ತೀರ್ಮಾನಕ್ಕೆ ಬಂದಿರುವುದಿಲ್ಲ.

*ವೆಚ್ಚ:* ತಿಳಿದಿರುವುದಿಲ್ಲ.

## 10. ಅಯಸ್ಕಾಂತಿಯ ನಿರೋಧಕ:

*ಪರಿಕಲ್ಪನೆ:* ಅಯಸ್ಕಾಂತೀಯ ಗ್ರಾಹಕಗಳನ್ನು ಸೃಷ್ಟಿಸಿ ಹಕ್ಕಿಗಳ ಮೇಲೆ ಕಾಂತೀಯ ಗ್ರಾಹಕಗಳ ಕ್ಷೋಭೆ ಉಂಟುಮಾಡುವುದು.

*ಪರಿಣಾಮಕತ್ವ*: ಪ್ರಾಯೋಗಿಕ ಪ್ರಯೋಗಗಳು ಇದರ ಮೇಲೆ ಆಗುವ ಪರಿಣಾಮದ ಬಗ್ಗೆ ಯಾವುದೇ ಸೂಚನೆ ನೀಡಿಲ್ಲ.

*ವೆಚ್ಚ:* ತಿಳಿದಿರುವುದಿಲ್ಲ.

## III ಕಾರ್ಯಾಚರಣೆಯ ಕ್ರಮಗಳು

## 1. ಗಾಳದ ಹುಳುಗಳು ಗೋಚರಿಸುವುದನ್ನು ಕಡಿಮೆ ಮಾಡುವುದು (ರಾತ್ರಿ ಬಿಡುವುದು)

*ಪರಿಕಲ್ಪನೆ*: ರಾತ್ರಿ ಹೊತ್ತಿನಲ್ಲಿ ಲೈನ್‌ನನ್ನು ಬಿಡುವುದು ಮತ್ತು ನೀರಿನಲ್ಲಿ ಗಾಳದ ಹುಳುಗಳು ಪ್ರಕಾಶಿಸುವುದನ್ನು ಕಡಿಮೆ ಮಾಡುವುದು.

*ಪರಿಣಾಮಕತ್ವ:* ಈ ವಿಧಾನವು ಸಾಮಾನ್ಯವಾಗಿ ಅತ್ಯಂತ ಪರಿಣಾಮಕಾರಿಯೆಂದು ಗುರುತಿಸಲ್ಪಟ್ಟಿದೆ. ಅದಾಗ್ಯೂ ಪರಿಣಾಮವು ಮೀನುಗಾರಿಕಾ ಪ್ರದೇಶ ಮತ್ತು ಋತುವಿನ ಮೇಲೆ ಸಮುದ್ರ ಹಕ್ಕಿಗಳ ಜಾತಿಗಳಿಗೆ ಅನ್ವಯಿಸಿ ಬದಲಾಗಬಹುದು. ಹುಣ್ಣಿಮೆಯ ಸಮೀಪ ಇದರ ಪರಿಣಾಮವು ಕಡಿಮೆಯಾಗಬಹುದು.

*ವೆಚ್ಚ:* ಲೈನ್‌ಗಳನ್ನು ಕತ್ತಲೆಯ ಅವಧಿಗಳಲ್ಲಿ ಮಾತ್ರ ಬಿಡಬೇಕೆಂಬ ನಿರ್ಬಂಧವು ಮೀನುಗಾರಿಕಾ ಸಾಮರ್ಥ್ಯದ ಮೇಲೆ, ಅದರಲ್ಲೂ ಸಣ್ಣ ಪ್ರಮಾಣದ ಗಾಳದ ಮೀನುಗಾರರಿಗೆ ನಷ್ಟ ಉಂಟು ಮಾಡಬಹುದು. ನೌಕೆಗಳಿಗೆ ಸೂಕ್ತವಾದ ಬೆಳಕನ್ನು ಅಳವಡಿಸುವುದರಿಂದ ಸಣ್ಣ ಮೊತ್ತದ ವೆಚ್ಚವನ್ನು ಭರಿಸಬೇಕಾಗುತ್ತದೆ.

ಅಂತಹ ನಿರ್ಬಂಧವು ದುಬಾರಿ ತಂತ್ರಜ್ಞಾನವನ್ನು ಉಪಯೋಗಿಸಿ ಕಡಿಮೆ ಅವಧಿಯಲ್ಲಿ ಮೀನುಗಾರಿಕೆಯನ್ನು ಅಧಿಕಗೊಳಿಸಲು ಹೂಡಿಕೆ ಮಾಡುವುದನ್ನು ಗುರಿಮಾಡುತ್ತದೆ

## 2. ಸಮುದ್ರ ಹಕ್ಕಿಗಳಿಗೆ ನೌಕೆಗಳು ಪ್ರಕಾಶಿಸುವುದನ್ನು ಕಡಿಮೆ ಮಾಡುವುದು

*ಪರಿಕಲ್ಪನೆ:* ಸಮುದ್ರ ಹಕ್ಕಿಗಳಿಗೆ ನೌಕೆಗಳು ಪ್ರಕಾಶಿಸುವುದನ್ನು ಕಡಿಮೆ ಮಾಡುವುದರಿಂದ ಸಂಭಾವ್ಯವಾಗಿ ಸಮುದ್ರ ಹಕ್ಕಿಗಳು ಆಕಸ್ಮಿಕವಾಗಿ ಹಿಡಿಯಲ್ಪಡುವುದು ಕಡಿಮೆ ಆಗುತ್ತದೆ. ನೌಕೆಗಳಿಂದ ಎಸೆಯಲ್ಪಟ್ಟ ಸಾಮಾಗ್ರಿಗಳು (ಅಂದರೆ ಮೀನಿನ ತ್ಯಜಿಸುವಿಕೆ, ಕಸ) ಸಮುದ್ರ ಹಕ್ಕಿಗಳಿಗೆ ಸಿಗದಂತೆ ಇರಬೇಕು ಅಥವಾ ಅವುಗಳಿಗೆ ಯಾವುದೇ ಹಾನಿ ಉಂಟು ಮಾಡಬಾರದು. ಇದು ತಿರಸ್ಕರಿಸಲ್ಪಟ್ಟ ಮೀನು, ಹೊಲಸು, ಮೀನಿನ ತಲೆ ಇತ್ಯಾದಿಗಳನ್ನು ಗಾಳದಲ್ಲಿ ಹುದುಗಿರುವ ವಸ್ತುಗಳನ್ನು ತಪ್ಪಿಸಿಕೊಳ್ಳುವಂತೆ ಎಸೆಯುವುದು. ಹೊಲಸನ್ನು ಎಸೆಯುವುದನ್ನು ತಪ್ಪಿಸಿಕೊಳ್ಳಲಾಗದಿದ್ದರೆ, ಅದನ್ನು ಗಾಳಗಳನ್ನು ಬಿಟ್ಟ ನೌಕೆಯ ವಿರುದ್ಧ ಧಿಕ್ಕಿನಲ್ಲಿ ಎಸೆಯ ಬೇಕು ಅಥವಾ ಹಕ್ಕಿಗಳು ನೌಕೆಯ ಕಡೆಗೆ ಆಕರ್ಷಿಸವಾಗದ ರೀತಿಯಲ್ಲಿ ಬೀಸಾಡಬೇಕು. (ಉದಾರಣೆಗೆ ರಾತ್ರಿ ಸಮಯದಲ್ಲಿ.)

*ಪರಿಣಾಮಕತ್ವ*: ಹೊಲಸು ನಿರ್ವಹಣೆ ಬಹಳ ಕಷ್ಟಕರವಾದ ವಿಷಯವಾಗಿದೆ ಮತ್ತು ಈ ತನಕ ಮಾಡಲಾದ ಅಧ್ಯಯನಗಳಲ್ಲಿ ಉಪಯೋಗಿಸಿದ ವಿಧಾನಗಳಲ್ಲಿ ತದ್ವಿರುದ್ಧವಾದ ಫಲಿತಾಂಶಗಳನ್ನು ಕಾಣಬಹುದಾಗಿದೆ.

*ವೆಚ್ಚ:* ವೆಚ್ಚ ಕಡಿಮೆ. ಆದರೆ ಕೆಲವು ಪರಿಸ್ಥಿತಿಗಳಲ್ಲಿ ವೆಚ್ಚವು ನೌಕೆಗಳಲ್ಲಿ ಸಂಬಂಧಿಸಿದ ಧಾರಕದೊಂದಿಗೆ ಅಥವಾ ಪುನರ್ವಿನ್ಯಾಸದ ಜೊತೆಗೆ ಹೊಂದಿರುತ್ತದೆ..

## 3. ಪ್ರದೇಶ ಮತ್ತು ಋತುಗಳ ಮುಚ್ಚುವಿಕೆ

*ಪರಿಕಲ್ಪನೆ:* ಪೋಷಣೆ ಅಥವಾ ಅನ್ವೇಷಣೆಯಲ್ಲಿ ಸಮುದ್ರ ಹಕ್ಕಿಗಳು ತೊಡಗಿರುವಾಗ ಆಕಸ್ಮಿಕವಾಗಿ ಸಿಗುವ ಸಮುದ್ರ ಹಕ್ಕಿಗಳನ್ನು ಕಡಿಮೆ ಮಾಡುವುದು.

*ಪರಿಣಾಮಕತ್ವ*: ಪ್ರದೇಶ ಮತ್ತು ಋತುಗಳ ಮುಚ್ಚುವಿಕೆಯು ಪರಿಣಾಮಕಾರಿಯಾಗ ಬಹುದು. (ಅಂದರೆ ಅನ್ವೇಷಣೆಯಲ್ಲಿ ಹೆಚ್ಚಾಗಿ ಸಾಂದ್ರತೆ ಅಥವಾ ಮರಿಗಳ ಆರೈಕೆ ಸಮಯದಲ್ಲಿ ಪೋಷಕ ಕರ್ತವ್ಯಗಳನ್ನು ಪೋಷಣೆ ಮಾಡುವ ವಯಸ್ಕ ಹಕ್ಕಿಗಳು ಸದ್ರಿ ಪ್ರದೇಶದಿಂದ ಹಾರಬಹುದು) ಆದರೆ ಮೀನುಗಾರಿಕಾ ನೌಕೆಗಳು ಸಮುದ್ರ ಹಕ್ಕಿಗಳಿರುವ ಇತರ ಪ್ರದೇಶಗಳಿಗೆ ಸ್ಥಳಾಂತರಿಸುವುದನ್ನು ಪರಿಗಣಿಸಬೇಕಾಗಿದೆ.

*ವೆಚ್ಚ:* ಗೊತ್ತಿಲ್ಲ. ಆದರೆ ಮೀನುಗಾರಿಕಾ ಪ್ರದೇಶದ ಮೇಲಿನ ಅಥವಾ ಋತುವಿನ ಮೇಲಿನ ನಿರ್ಬಂಧ ಮೀನುಗಾರಿಕೆಯ ಸಾಮರ್ಥ್ಯದ ಮೇಲೆ ಪರಿಣಾಮ ಬೀರಬಹುದು.

**4. ನೌಕೆಗಳು ತಗ್ಗಿಸುವಿಕೆಯ ಕ್ರಮಗಳನ್ನು ಕೈಗೊಂಡಿದಲ್ಲಿ ಮತ್ತು ಅವುಗಳಿಗೆ ಅನುಸರಣೆ ಮೇಲ್ವಿಚಾರಣೆಯ ಅಗತ್ಯವಿಲ್ಲದಿದ್ದಲ್ಲಿ, ಅಂತವರಿಗೆ ಆದ್ಯತೆಯ ಮೇಲೆ ಪರವಾನಗಿಯನ್ನು ನೀಡುವುದು**

*ಪರಿಕಲ್ಪನೆ:* ತಗ್ಗಿಸುವಿಕೆಯ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಸರಣೆ ಮಾಡುತ್ತಿದ್ದು ಅಂತವರಿಗೆ ಅನುಸರಣೆ ಮೇಲ್ವಿಚಾರಣೆ ಅಗತ್ಯ ಇಲ್ಲದಿದ್ದಲ್ಲಿ ಅವರಿಗೆ ಪ್ರೋತ್ಸಾಹವಾಗಿ ನೀಡುವುದು.

*ಪರಿಣಾಮಕತ್ವ:* ತಗ್ಗಿಸುವ ಕ್ರಮಗಳನ್ನು ಉತ್ತೇಜಿಸಲು ಮತ್ತು ಸಮುದ್ರದ ಹಕ್ಕಿಗಳನ್ನು ಹಿಡಿಯುವುದನ್ನು ಕಡಿಮೆ ಮಾಡುವ ಮೀನುಗಾರಿಕಾ ವಿಧಾನಗಳನ್ನು ಅಭಿವೃದ್ಧಿ ಪಡಿಸಲು ಇದು ತುಂಬಾ ಪರಿಣಾಮಕಾರಿಯಾಗಿದೆ.

*ವೆಚ್ಚ:* ತಿಳಿದಿರುವುದಿಲ್ಲ.

**5. ಜೀವಂತ ಹಕ್ಕಿಗಳನ್ನು ಬಿಡುಗಡೆ ಮಾಡುವುದು.**

*ಪರಿಕಲ್ಪನೆ:* ಮುನ್ನೆಚರಿಕೆಯ ಕ್ರಮಗಳನ್ನು ತೆಗೆದು ಕೊಂಡಾಗಲೂ, ಸಮುದ್ರ ಹಕ್ಕಿಗಳು ಆಕಸ್ಮಿಕವಾಗಿ ಹಿಡಿಯಲ್ಪಟ್ಟಲ್ಲಿ, ಜೀವಂತವಿರುವ ಹಕ್ಕಿಗಳನ್ನು ನೌಕೆಯ ಒಳಗೆ ತರುವಲ್ಲಿ ಎಲ್ಲಾ ಸಮಂಜಸವಾದ ಪ್ರಯತ್ನ ಮಾಡುವುದನ್ನು ಖಚಿತ ಪಡಿಸಿ ಕೊಳ್ಳತಕ್ಕದ್ದು ಹಾಗೂ ಜೀವಂತ ಹಕ್ಕಿಗಳನ್ನು ಬಿಡುಗಡೆ ಮಾಡತಕ್ಕದ್ದು. ಒಂದು ವೇಳೆ ಜೀವಂತವಿರುವ ಹಕ್ಕಿಗಳು ಗಾಳಕ್ಕೆ ಸಿಕ್ಕಿಹಾಕಿ ಕೊಂಡಿದ್ದಲ್ಲಿ ಹಕ್ಕಿಗಳ ಜೀವಕ್ಕೆ ಯಾವುದೇ ಅಪಾಯವಾಗದಂತೆ ಅದನ್ನು ಬಿಡಿಸುವುದು.

*ಪರಿಣಾಮಕತ್ವ*: ಎಷ್ಟು ಸಂಖ್ಯೆಯ ಹಕ್ಕಿಗಳನ್ನು ನೌಕೆಯ ಒಳಗೆ ಜೀವಂತವಾಗಿ ತರಲಾಗಿದೆ ಮತ್ತು ಲೈನ್ ಜೋಡಣೆಯಿಂದ ಸಾಯುವ ಹಕ್ಕಿಗಳ ಸಂಖ್ಯೆಗಳಿಗೆ ಹೋಲಿಕೆ ಮಾಡಿದಾಗ ಇದರ ಪ್ರಮಾಣ ಕಡಿಮೆ ಎಂದು ಪರಿಗಣಿಸಿದೆ

*ವೆಚ್ಚ:* ತಿಳಿದಿರುವುದಿಲ್ಲ.

# ಶಾರ್ಕ್ ಮೀನುಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ

## ಪರಿಚಯ

1. ನೂರಾರು ವರ್ಷಗಳಿಂದ ಸಾಂಪ್ರದಾಯಿಕ ಮೀನುಗಾರರು ಶಾರ್ಕ್ ಮೀನುಗಾರಿಕೆಯನ್ನು ಕರಾವಳಿಯಲ್ಲಿ ಸಮರ್ಥನೀಯವಾಗಿ ಮಾಡುತ್ತಿದ್ದರು ಮತ್ತು ಕೆಲವರು ಈಗಲೂ ಮಾಡುತ್ತಿದ್ದಾರೆ. ಆದರೆ ಇತ್ತೀಚೆಗಿನ ದಶಕಗಳಲ್ಲಿ ದೂರದ ಮಾರ್ಕೆಟ್‌ಗಳಿಗೆ ಸರಬರಾಜು ಮಾಡುವ ಗುರಿಯನ್ನು ಇಟ್ಟುಕೊಂಡು, ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿ ಹೆಚ್ಚಿನ ಪ್ರಯತ್ನವನ್ನು ಹಾಗೂ ಹೆಚ್ಚಿನ ಪ್ರದೇಶದಲ್ಲಿ ಮೀನುಗಾರಿಕೆಯನ್ನು ಮಾಡಿ ಶಾರ್ಕ್ ಮೀನುಗಳ ಹಿಡುವಳಿಯ ಇಳುವರಿಯನ್ನು ಹೆಚ್ಚು ಮಾಡಿರುತ್ತಾರೆ.

2. ಶಾರ್ಕ್ ಮೀನುಗಳ ಹಿಡುವಳಿಯಲ್ಲಿ ಹೆಚ್ಚಾಗಿರುವುದು ಮತ್ತು ಪ್ರಪಂಚದ ಕೆಲವು ರಾಷ್ಟ್ರಗಳ ಸಾಗರಗಳಲ್ಲಿ ಕೆಲವು ಜಾತಿಯ ಶಾರ್ಕ್ ಮೀನುಗಳ ಸಂಖ್ಯೆಗಳು ಹೆಚ್ಚಳ ಆಗಿರುವ ಪರಿಣಾಮಗಳ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಲಾಗಿದೆ. ಇದು ಯಾಕೆಂದರೆ ಶಾರ್ಕ್ ಮೀನುಗಳು ಸಾಮಾನ್ಯವಾಗಿ ದಾಸ್ತಾನನ್ನು ನಿಕಟವಾಗಿ ಹೆಚ್ಚಿಸುವಲ್ಲಿ, ಅತಿಯಾದ ಮೀನುಗಾರಿಕೆಯಿಂದ ದೀರ್ಘ ಚೇತರಿಕೆ ಸಮಯ (ತಡವಾಗಿ ಲೈಂಗಿಕ ಪರಿಪಕ್ವತೆ ಯಾಕೆಂದರೆ ಕಡಿಮೆ ಜೈವಿಕ ಉತ್ಪಾದನೆ, ಕಡಿಮೆ ಸಂತತಿ, ಆದರೂ ಕಡಿಮೆ ನೈಸರ್ಗಿಕ ಮರಣ) ಮತ್ತು ವಿಶೇಷವಾದ ರಚನೆಗಳನ್ನು ಹೊಂದಿರುತ್ತದೆ. (ಗಾತ್ರ/ಲಿಂಗ, ಪ್ರತ್ಯೇಕತೆ ಮತ್ತು ಋತುವಿನ ವಲಸೆ).

3. ಪ್ರಸ್ತುತ ಜ್ಞಾನದ ಪ್ರಕಾರ ಶಾರ್ಕ್‌ಗಳ ಮತ್ತು ಶಾರ್ಕ್ ಮೀನುಗಾರಿಕೆಯಲ್ಲಿ ಉಪಯೋಗಿಸುವ ತಂತ್ರ-ಜ್ಞಾನಗಳು ಶಾರ್ಕ್‌ಗಳ ಸಂರಕ್ಷಣೆ ಮತ್ತು ಕಾರ್ಯನಿರ್ವಹಣೆ ಬಗ್ಗೆ ಸಮಸ್ಯೆಗಳನ್ನು ಉಂಟು ಮಾಡುತ್ತಿವೆ. ಯಾಕೆಂದರೆ ಲಭ್ಯವಾಗಿರುವ ಹಿಡುವಳಿಯ ಮಾಹಿತಿ ಕೊರತೆ, ಇಳುವರಿ ಮತ್ತು ಅದರ ವ್ಯಾಪಾರದ ದತ್ತಾಂಶ, ಹೆಚ್ಚಿನ ಜಾತಿಯ ಶಾರ್ಕ್‌ಗಳ ಜೈವಿಕ ನಿಯತಾಂಕಗಳ ಮತ್ತು ಅವುಗಳನ್ನು ಗುರುತಿಸುವುದು ಲಭ್ಯವಾಗಿಲ್ಲ. ಶಾರ್ಕ್‌ಗಳ ಲಭ್ಯತೆ ಮತ್ತು ಇತರ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸುವ ಬಗ್ಗೆ ಸಾಕಷ್ಟು ಹಣ ಸಂಶೋಧನೆ ಮತ್ತು ನಿರ್ವಹಣೆ ಸಲುವಾಗಿ ಬೇಕಾಗಿದೆ.

4. ಚಾಲ್ತಿಯಲ್ಲಿರುವ ವೀಕ್ಷಣೆ ಪ್ರಕಾರ, ಶಾರ್ಕ್ ಹಿಡುವಳಿಯ ಉತ್ತಮ ನಿರ್ವಹಣೆ ಮಾಡುವುದು ಅಗತ್ಯವಾಗಿದೆ. ಕೆಲವು ಬಹುಜಾತಿಯ ಮೀನುಗಾರಿಕೆಯಲ್ಲಿ ಶಾರ್ಕ್‌ಗಳು ಗಮನಾರ್ಹವಾಗಿ ಉಪ-ಉತ್ಪನ್ನ ಆಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ನಿರ್ವಹಣೆಯ ಅಗತ್ಯ ತುರ್ತಾಗಿ ಬೇಕಾಗಿದೆ.

5. ಶಾರ್ಕ್ ಮೀನುಗಾರಿಕೆ ಬಗ್ಗೆ ಕೆಲವು ರಾಷ್ಟ್ರಗಳಲ್ಲಿ ನಿರ್ಧಿಷ್ಟ ನಿರ್ವಹಣೆ ಯೋಜನೆ ಅಂದರೆ ಪ್ರವೇಶ ನಿಯಂತ್ರಣ, ತಾಂತ್ರಿಕ ಕ್ರಮಗಳು ಅಂದರೆ ಶಾರ್ಕ್ ಉಪ-ಉತ್ಪನ್ನಗಳನ್ನು ಕಡಿಮೆ ಮಾಡುವ ತಂತ್ರಗಳು ಮತ್ತು ಶಾರ್ಕ್‌ಗಳನ್ನು ಪೂರ್ತಿಯಾಗಿ ಉಪಯೋಗಿಸುವ ಕ್ರಮಗಳು ಇವೆ. ಸಾಗರದಾಚೆಗೆ ವಿಸ್ತೃತ ಶ್ರೇಣಿಯ ಹಂಚಿಕೆ ಮತ್ತು ಹೆಚ್ಚಿನ ಜಾತಿಯ

ಶಾರ್ಕ್‌ಗಳ ದೀರ್ಘ ವಲಸೆ ಇವುಗಳ ಬಗ್ಗೆ ಅಂತರಾಷ್ಟ್ರೀಯ ಸಹಕಾರ ಮತ್ತು ಸಮನ್ವಯತೆ ಶಾರ್ಕ್ ನಿರ್ವಹಣೆಯಲ್ಲಿ ಹೆಚ್ಚು ಪ್ರಮುಖವಾಗಿರುತ್ತದೆ. ಪ್ರಸ್ತುತ ಕೆಲವು ಅಂತರಾಷ್ಟ್ರೀಯ ನಿರ್ವಹಣಾ ಯಾಂತ್ರಿಕ ಕೌಶಲ್ಯವು ಪರಿಣಾಮಕಾರಿಯಾಗಿ ಶಾರ್ಕ್ ಮೀನು ಹಿಡಿಯುವುದನ್ನು ತಿಳಿಯ ಹೇಳುತ್ತದೆ.

6. ಅಮೇರಿಕಾದ ಆಂತರಿಕ ಉಷ್ಣವಲಯದ ಟ್ಯೂನಾ ಆಯೋಗ, ಅಂತರಾಷ್ಟ್ರೀಯ ಸಮುದ್ರ ಪರಿಶೋಧನಾ ಮಂಡಲ, ಅಟ್ಲಾಂಟಿಕ್ ಟ್ಯೂನಾ ಸಂರಕ್ಷಣಾ ಮಂಡಲ, ವಾಯುವ್ಯ ಅಟ್ಲಾಂಟಿಕ್ ಮೀನುಗಾರಿಕಾ ಸಂಸ್ಥೆ, ಉಪ–ಪ್ರಾದೇಶಿಕ ಪಶ್ಚಿಮ ಆಫ್ರಿಕಾದ ರಾಜ್ಯಗಳ ಮಂಡಲ, ಲ್ಯಾಟಿನ್ ಅಮೇರಿಕಾದ ಮೀನುಗಾರಿಕಾ ಅಭಿವೃದ್ಧಿ ಸಂಸ್ಥೆ, ಹಿಂದೂ ಮಹಾಸಾಗರದ ಟ್ಯೂನಾ ಮಂಡಲ, ದಕ್ಷಿಣದ ಬ್ಲೂಫಿನ್ ಟ್ಯೂನಾ ಸಂರಕ್ಷಣೆಯ ಮಂಡಲ ಮತ್ತು ಪೆಸಿಫಿಕ್ ಸಮುದಾಯದ ಸಾಗರದ ಮೀನುಗಾರಿಕಾ ಕಾರ್ಯಕ್ರಮ ಇವುಗಳು ಶಾರ್ಕ್‌ಗಳ ಬಗ್ಗೆ ಮಾಹಿತಿ ಸಂಗ್ರಹಣೆಯನ್ನು ಮಾಡಲು ಸದಸ್ಯ ರಾಷ್ಟ್ರಗಳಿಗೆ ಪ್ರೋತ್ಸಾಹಿಸಿ ಚಾಲನೆ ನೀಡಿವೆ ಮತ್ತು ಕೆಲವು ಸಂದರ್ಭಗಳಲ್ಲಿ ಶಾರ್ಕ್‌ಗಳ ಮೌಲ್ಯಮಾಪನದ ಸಲುವಾಗಿ ಪ್ರಾದೇಶಿಕ ದತ್ತಾಂಶಗಳನ್ನು ಅಭಿವೃದ್ಧಿ ಪಡಿಸಿವೆ.

7. ಶಾರ್ಕ್ ಮೀನುಗಳ ಹಿಡಿಯುವಿಕೆಯ ಪ್ರಮಾಣ ಹೆಚ್ಚಾಗಿರುವುದನ್ನು ಗಮನಿಸಲಾಗಿದ್ದು, ಈ ಬಗ್ಗೆ ಕಾಳಜಿ ಹೆಚ್ಚಾಗಿದೆ ಮತ್ತು ಇದರಿಂದಾಗಿ ಶಾರ್ಕ್‌ಗಳ ಮೇಲೆ ಸಂಭಾವ್ಯ ನಕರಾತ್ಮಕ ಪ್ರಭಾವವುಂಟಾಗಿರುವುದರಂದ, ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಮೀನುಗಾರಿಕಾ ಸಮಿತಿ (COFI) ಮಾರ್ಚ್ 1997 ರಲ್ಲಿ ನಡೆದ 22ನೇ ಅಧಿವೇಶನದಲ್ಲಿ, ಆಹಾರ ಮತ್ತು ಕೃಷಿ ಸಂಸ್ಥೆ (FAO) ಹೆಚ್ಚುವರಿ ಅನುದಾನದ ನಿಧಿಯನ್ನು ಉಪಯೋಗಿಸಿಕೊಂಡು ಶಾರ್ಕ್ ಮೀನುಗಳ ಸಂರಕ್ಷಣೆ ಮತ್ತು ನಿರ್ವಹಣೆ ಬಗ್ಗೆ ತಜ್ಞರ ಸಮಾಲೋಚನಾ ಸಮಿತಿ ಸಭೆಯನ್ನು ಕರೆದು ಸುಧಾರಿತ ಮಾರ್ಗಸೂಚಿಗಳನ್ನು ಅಭಿವೃದ್ಧಿ ಪಡಿಸಿ ಅದನ್ನು ಸಮಿತಿಯ ಮುಂದಿನ ಅಧಿವೇಶನದಲ್ಲಿ ಮಂಡಿಸುವಂತೆ ಸೂಚಿಸಿರುತ್ತದೆ.

8. ಶಾರ್ಕ್ ಸಂರಕ್ಷಣೆ ಮತ್ತು ನಿರ್ವಹಣೆ ಬಗ್ಗೆ ಅಂತರಾಷ್ಟ್ರೀಯ ಕ್ರಿಯಾಯೋಜನೆ (IPOA-SHARKS) ಇದನ್ನು ಟೋಕಿಯೋದಲ್ಲಿ 1998 ಏಪ್ರಿಲ್ 23 ರಿಂದ 27 ರ ವರೆಗೆ ನಡೆದ ಶಾರ್ಕ್‌ಗಳ ಸಂರಕ್ಷಣೆ ಮತ್ತು ನಿರ್ವಹಣೆ ಇದರ ಕಾರ್ಯಾಗಾರದ ತಾಂತ್ರಿಕ ಸಮಿತಿ ಸಭೆಯಲ್ಲಿ ಮತ್ತು ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆ ಮೇಲೆ ಸಮಾಲೋಚನೆ, 1998[4] ಅಕ್ಟೋಬರ್ 26 ರಿಂದ 30 ರ ವರೆಗೆ ರೋಮ್‌ನಲ್ಲಿ ನಡೆದ ಶಾರ್ಕ್ ಮೀನುಗಾರಿಕೆ ಮತ್ತು ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳು

4 "ಆಹಾರ ಮತ್ತು ಕೃಷಿ ಸಂಸ್ಥೆಯ ತಾಂತಿಕ್ರ ಸಮಿತಿ ಸಭೆ ಶಾರ್ಕ್‌ಗಳ ಸಂರಕ್ಷಣೆ ಮತ್ತು ನಿರ್ವಹಣೆ" 23–27 ಏಪ್ರಿಲ್ 1998 ರಲ್ಲಿ ಟೋಕಿಯೋ, ಜಪಾನ್‌ನಲ್ಲಿ ಜರಗಿದ ತಾಂತ್ರಿಕ ಸಮಿತಿ ಸಭೆಯ ವರದಿಯನ್ನು ನೋಡಿ. ಆಹಾರ ಮತ್ತು ಕೃಷಿ ಸಂಸ್ಥೆ ಇದರ ವರದಿ ಸಂಖ್ಯೆ. 583

ಮತ್ತು 1998 ಜುಲಾಯಿ 22 ರಿಂದ 24 ರ ವರೆಗೆ[5] ರೋಮ್‌ನಲ್ಲಿ ನಡೆದ ಅದರ ಪ್ರಾಥಮಿಕ ಸಭೆಯಲ್ಲಿ ಅಭಿವೃದ್ಧಿ ಪಡಿಸಲಾಗಿದೆ.

9. IPOA-SHARKS ಈ ದಾಖಲೆಯಲ್ಲಿ ಪ್ರಕೃತಿ ಮತ್ತು ವ್ಯಾಪ್ತಿ, ತತ್ವಗಳು, ಉದ್ದೇಶಗಳು ಮತ್ತು ಕಾರ್ಯ ವಿಧಾನಗಳು ಮತ್ತು ಅನುಷ್ಠಾನಗೊಳಿಸಲು ಕಾರ್ಯವಿಧಾನಗಳನ್ನು (ಭಾಂದವ್ಯಗಳು ಸೇರಿದಂತೆ) ತಿಳಿಸಿರುತ್ತದೆ.

## ಪ್ರಕೃತಿ ಮತ್ತು ವ್ಯಾಪ್ತಿ.

10. IPOA-SHARKS ಸ್ವಯಂ ಪ್ರೇರಿತವಾಗಿದೆ. ಇದನ್ನು ವಿಸ್ತಾರವಾಗಿ ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆಯ ಕಲಮು 2 (ಡಿ) ಇದರ ಚೌಕಟ್ಟಿನೊಳಗೆ ರಚಿಸಲಾಗಿದೆ. ನೀತಿ ಸಂಹಿತೆಯ ಕಲಮು ಸಂಖ್ಯೆ 3 ರಲ್ಲಿ ಕಲ್ಪಿಸಿರುವ ಉಪಪದಗಳಲ್ಲಿ ಈ ದಾಖಲೆಯ ವ್ಯಾಖ್ಯಾನವನ್ನು ಮತ್ತು ಅದು ಯಾರಿಗೆ ಅನ್ವಯವಾಗುತ್ತದೆ ಎಂಬುದನ್ನು ಮತ್ತು ಇತರ ಅಂತರಾಷ್ಟ್ರೀಯ ಸಾಧನಗಳ ಸಂಬಂಧವನ್ನು ತಿಳಿಸಲಾಗಿದೆ. ಎಲ್ಲಾ ರಾಷ್ಟ್ರಗಳು ಇದನ್ನು ಅನುಷ್ಠಾನಗೊಳಿಸುವಂತೆ ಉತ್ತೇಜನ ನೀಡಲಾಗಿದೆ[6].

11. ಈ ದಾಖಲೆಗಳ ಉದ್ದೇಶಕ್ಕಾಗಿ "ಶಾರ್ಕ್" ಎಂದರೆ ಎಲ್ಲಾ ಜಾತಿಯ ಶಾರ್ಕ್ ಮೀನುಗಳು, ಪಣಕೋರಿ ಮೀನುಗಳು (skates) ಮತ್ತು ತೊರಕೆ/ಸೊರಕೆ ಮೀನುಗಳು, ಕಕ್ಕೆ ಮೀನುಗಳು chimaeeras (class: chonmdichthyes) ಮತ್ತು "ಶಾರ್ಕ್ ಹಿಡುವಳಿ" ಅಂದರೆ ಉಪ–ಉತ್ಪನ್ನ, ವಾಣಿಜ್ಯ, ಮನೋರಂಜನೆಗಾಗಿ ಹಿಡಿಯುವ ಮತ್ತು ಇತರ ರೂಪಗಳಿಂದ ತೆಗೆಯುವ ಶಾರ್ಕ್‌ಗಳು ಸೇರಿರುತ್ತದೆ.

12. IPOA-SHARKS ಗುರಿ ಇರುವ ಮತ್ತು ಗುರಿ ಇಲ್ಲದ ಈ ಎರಡನ್ನೂ ಒಳಗೊಂಡಿರುತ್ತದೆ.

## ತತ್ವಗಳ ಮಾರ್ಗದರ್ಶಿ

13. *ಭಾಗವಹಿಸುವಿಕೆ*: ಯಾವ ರಾಷ್ಟ್ರಗಳು ಮೀನುಗಳ ಜಾತಿಯ ಅಥವಾ ದಾಸ್ತಾನುಗಳ ಮರಣದಲ್ಲಿ ಪಾಲ್ಗೊಳ್ಳುತ್ತವೆಯೋ ಅಂತಹ ರಾಷ್ಟ್ರಗಳು ಇದರ ನಿರ್ವಹಣೆಯನ್ನು ಮಾಡಲು ಭಾಗವಹಿಸ ತಕ್ಕದ್ದು.

14. *ಸುಸ್ಥಿರವಾದ ದಾಸ್ತಾನು:* ನಿರ್ವಹಣೆ ಮತ್ತು ಸಂರಕ್ಷಣಾ ತಂತ್ರದ ಕೌಶಲ್ಯವನ್ನು ಎಲ್ಲಾ ಮೀನುಗಾರಿಕೆಗೆ ಮುನ್ನೆಚ್ಚರಿಕೆಯ ನಿಲುವನ್ನು ಉಪಯೋಗಿಸಿಕೊಂಡು ಪ್ರತೀ ಮೀನಿನ ದಾಸ್ತಾನು ಮರಣ ಹೊಂದದೆ ಸಮರ್ಥನೀಯವಾದ ಬಳಕೆಗಾಗಿ ಇರುವಂತೆ ನೋಡಿಕೊಳ್ಳತಕ್ಕದ್ದು.

---

5 "ಮೀನುಗಾರಿಕಾ ಸಾಮರ್ಥ್ಯದ, ಶಾರ್ಕ್ ಮೀನುಗಾರಿಕೆ ಮತ್ತು ಗಾಳ ಮೀನುಗಾರಿಕೆಯಲ್ಲಿ ಆಕಸ್ಮಿಕವಾಗಿ ಹಿಡಿಯಲ್ಪಡುವ ಸಮುದ್ರ ಹಕ್ಕಿಗಳು ಇದರ ಪ್ರಾಥಮಿಕ ಸಮಾಲೋಚನೆ ಸಭೆಯ ವರದಿ" ರೋಮ್, ಇಟಲಿ, 22–24 ಜುಲಾಯಿ 1998. ಆಹಾರ ಮತ್ತು ಕೃಷಿ ಸಂಸ್ಥೆ ಇದರ ವರದಿ ಸಂಖ್ಯೆ. 584

6 ಈ ದಾಖಲೆಯಲ್ಲಿ "ರಾಷ್ಟ್ರ" ಇದು ಆಹಾರ ಮತ್ತು ಕೃಷಿ ಸಂಸ್ಥೆಯ ಸದಸ್ಯರು ಮತ್ತು ಸದಸ್ಯರಲ್ಲದವರು ಮತ್ತು ಅವಶ್ಯ ಬದಲಾವಣೆಯೊಂದಿಗೆ ಅನ್ವಯಿಸುತ್ತದೆ ಮತ್ತು ರಾಷ್ಟ್ರಗಳು ಅಲ್ಲದೆ "ಮೀನುಗಾರಿಕಾ ಘಟಕಗಳು" ಕೂಡಾ ಸೇರಿರುತ್ತದೆ.

15. *ಪೌಷ್ಠಿಕಾಂಶ ಮತ್ತು ಸಾಮಾಜಿಕ–ಆರ್ಥಿಕ ಪರಿಗಣನೆ:* ನಿರ್ವಹಣೆ ಮತ್ತು ಸಂರಕ್ಷಣೆಯ ಉದ್ದೇಶಗಳು ಮತ್ತು ತಂತ್ರಗಳು, ಕೆಲವು ಕಡಿಮೆ–ಆದಾಯದ ಆಹಾರದ ಕೊರತೆ ಇರುವ ಪ್ರದೇಶಗಳು ಮತ್ತು /ಅಥವಾ ರಾಷ್ಟ್ರಗಳಲ್ಲಿ ಶಾರ್ಕ್ ಹಿಡುವಳಿಗಳು ಸಾಂಪ್ರದಾಯಿಕ ಮತ್ತು ಮುಖ್ಯವಾದ ಆಹಾರದ ಮೂಲ ಅಲ್ಲದೆ ಉದ್ಯೋಗ ಮತ್ತು / ಅಥವಾ ಆದಾಯ ತರುವಂತದ್ದು ಆಗಿದೆ. ಅಂತಹ ಹಿಡುವಳಿಗಳನ್ನು ಸಮರ್ಥನೀಯವಾಗಿ ಮುಂದುವರಿಸುವ ಆಹಾರದ ಮೂಲ, ಉದ್ಯೋಗ ಮತ್ತು ಸ್ಥಳೀಯ ಸಮುದಾಯಗಳಿಗೆ ಆದಾಯ ಎಂದು ಪರಿಗಣಿಸತಕ್ಕದ್ದು.

## ಉದ್ದೇಶ

16. IPOA-SHARKS ಇದರ ಉದ್ದೇಶವೇನೆಂದರೆ ಶಾರ್ಕ್‌ಗಳ ಸಂರಕ್ಷಣೆ ಮತ್ತು ನಿರ್ವಹಣೆ ಮತ್ತು ಅದರ ದೀರ್ಘ ಕಾಲದ ಸಮರ್ಥನೀಯ ಬಳಸುವಿಕೆ.

17. IPOA-SHARKS ಇದು ಯಾವ ರಾಷ್ಟ್ರದ ನೀರಿನಲ್ಲಿ ಶಾರ್ಕ್‌ಗಳನ್ನು ಅವರ ಸ್ವಂತ ಅಥವಾ ವಿದೇಶಿ ನೌಕೆಗಳ ಮೂಲಕ ಹಿಡಿಯುತ್ತಾರೋ ಮತ್ತು ಯಾವ ರಾಷ್ಟ್ರಗಳು ಸಾಗರದಾಚೆಗೆ ಶಾರ್ಕ್‌ಗಳನ್ನು ಹಿಡಿಯುತ್ತಾರೋ ಅಂತಹ ರಾಷ್ಟ್ರಗಳಿಗೆ ಅನ್ವಯಿಸುತ್ತದೆ.

18. ಯಾವ ರಾಷ್ಟ್ರದ ನೌಕೆಗಳು ನೇರ ಮೀನುಗಾರಿಕೆಯಲ್ಲಿ ಶಾರ್ಕ್‌ಗಳನ್ನು ಹಿಡಿಯುತ್ತಾರೋ ಅಥವಾ ಅವರ ನೌಕೆಗಳು ಪರೋಕ್ಷವಾಗಿ ಮೀನುಗಾರಿಕೆಯಲ್ಲಿ ನಿಯಮಿತವಾಗಿ ಶಾರ್ಕ್‌ಗಳನ್ನು ಹಿಡಿಯುತ್ತಾರೋ ಅಂತಹ ರಾಷ್ಟ್ರಗಳು ಶಾರ್ಕ್ ಮೀನಿನ ದಾಸ್ತಾನಿನ ಬಗ್ಗೆ (ಶಾರ್ಕ್ ಯೋಜನೆ) ರಾಷ್ಟ್ರೀಯ ಯೋಜನೆಯನ್ನು ಅಳವಡಿಸಿ ಕೊಳ್ಳತಕ್ಕದ್ದು. ಶಾರ್ಕ್ ಯೋಜನೆಯಲ್ಲಿ ಸಲಹೆ ಮಾಡಿರುವ ವಿಷಯಗಳನ್ನು ಅನುಬಂಧ–ಅ ಇದರಲ್ಲಿ ನೀಡಲಾಗಿದೆ. ಶಾರ್ಕ್ ಯೋಜನೆಯನ್ನು ಅಭಿವೃದ್ಧಿ ಪಡಿಸುವಾಗ ಉಪ–ಪ್ರಾದೇಶಿಕ ಮತ್ತು ಪ್ರಾದೇಶಿಕ ಮೀನುಗಾರಿಕಾ ನಿರ್ವಹಣಾ ಸಂಸ್ಥೆಗಳ ಅನುಭವಗಳನ್ನು ಸೂಕ್ತವೆಂದು ಪರಿಗಣಿಸಿ ತೆಗೆದು ಕೊಳ್ಳತಕ್ಕದ್ದು.

19. ಪ್ರತೀ ರಾಷ್ಟ್ರವು ಶಾರ್ಕ್ ಯೋಜನೆಯನ್ನು ಅಭಿವೃದ್ಧಿ ಪಡಿಸಲು, ಅನುಷ್ಠಾನಗೊಳಿಸಲು ಮತ್ತು ಅದರ ಮೇಲ್ವಿಚಾರಣೆ ಮಾಡಲು ಜವಾಬ್ದಾರರಾಗಿರುತ್ತದೆ.

20. ಶಾರ್ಕ್ ಯೋಜನೆಯ ಬಗ್ಗೆ ಮೀನುಗಾರಿಕಾ ಸಮಿತಿಯ COFI 2001 ರ ಅಧಿವೇಶನದಲ್ಲಿ ಮಾಹಿತಿಯನ್ನು ನೀಡುವಲ್ಲಿ ಪ್ರಯತ್ನಿಸ ತಕ್ಕದ್ದು.

21. ಶಾರ್ಕ್‌ನ ದಾಸ್ತಾನಿನ ಸ್ಥಿತಿಯ ಬಗ್ಗೆ ರಾಷ್ಟ್ರಗಳು ಸಾಮಾನ್ಯ ಮೌಲ್ಯಮಾಪನ ಕೈಗೊಳ್ಳತಕ್ಕದ್ದು ಮತ್ತು ಮೀನುಗಾರಿಕೆಗೆ ಒಳಪಟ್ಟು ಶಾರ್ಕ್ ಯೋಜನೆ ಅಭಿವೃದ್ಧಿಗೊಳಿಸುವುದು ಅಗತ್ಯ ಇದೆಯೋ ಎಂದು ನಿರ್ಧರಿಸತಕ್ಕದ್ದು. ಈ ಮೌಲ್ಯಮಾಪನವನ್ನು ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆ ಇದರ ಒಪ್ಪಂದದ ಕಲಮು 6.13 ರಂತೆ ಮಾಡತಕ್ಕದ್ದು. ಶಾರ್ಕ್ ಯೋಜನೆಯ ಮೌಲ್ಯಮಾಪನದ ವರದಿಯನ್ನು ಆಯಾ ರಾಷ್ಟ್ರದ ಶಾರ್ಕ್ ಯೋಜನೆಯ ಸಂಬಂಧಿತ ವರದಿಯ ಭಾಗ ಎಂದು ಪರಿಗಣಿಸತಕ್ಕದ್ದು. ಶಾರ್ಕ್ ಮೌಲ್ಯಮಾಪನದ ಸಲಹಾ ವಿಷಯಗಳ ವರದಿಯನ್ನು

ಅನುಬಂಧ–ಬ ದಲ್ಲಿ ನೀಡಲಾಗಿದೆ. ವಾಣಿಜ್ಯ ದತ್ತಾಂಶಗಳನ್ನು ಸೇರಿಸಿ ದತ್ತಾಂಶಗಳ ಸ್ಥಿರವಾದ ಸಂಗ್ರಹಣೆ ಮತ್ತು ಜಾತಿಗಳನ್ನು ಗುರುತಿಸುವಲ್ಲಿ ದತ್ತಾಂಶಗಳ ಸುಧಾರಣೆ ಮತ್ತು ಅಂತಿಮವಾಗಿ ಸೂಚ್ಯಾಂಕಗಳ ಮೌಲ್ಯಮಾಪನದ ಅವಶ್ಯಕತೆಯನ್ನು ನೀಡಲಾಗಿದೆ. ರಾಷ್ಟ್ರಗಳು ಸಂಗ್ರಹಿಸಿದ ದತ್ತಾಂಶಗಳನ್ನು ಎಲ್ಲಿ ಸೂಕ್ತವೋ ಅಲ್ಲಿ ಲಭ್ಯವಾಗುವಂತೆ ಮತ್ತು ಅದನ್ನು ಸಂಬಂಧಿತ ಉಪ–ಪ್ರಾದೇಶಿಕ ಮತ್ತು ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳಲ್ಲಿ ಲಭ್ಯವಾಗುವಂತೆ ಮತ್ತು ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಅಂತರಾಷ್ಟ್ರೀಯ ಸಹಯೋಗದೊಂದಿಗೆ ದತ್ತಾಂಶ ಸಂಗ್ರಹಣೆಯನ್ನು ಮತ್ತು ದತ್ತಾಂಶ ಹಂಚಿಕೆ ವ್ಯವಸ್ಥೆಯನ್ನು ಮಾಡತಕ್ಕದ್ದು. ದಾಸ್ತಾನುಗಳ ಮೌಲ್ಯಮಾಪನದಲ್ಲಿ ಗಡಿಯಾಚೆಯ, ವ್ಯಾಪಿಸಿಕೊಂಡಿರುವ ಮತ್ತು ಹೆಚ್ಚಾಗಿ ವಲಸೆಹೋಗುವ ಮತ್ತು ಸಾಗರದಾಚೆಯ ಶಾರ್ಕ್‌ಗಳ ದಾಸ್ತಾನು ಇವುಗಳು ಮುಖ್ಯವಾಗಿವೆ.

22. ಶಾರ್ಕ್ ಯೋಜನೆಯಲ್ಲಿ ಈ ಕೆಳಗಿನವುಗಳನ್ನು ಗುರಿಯಾಗಿಟ್ಟು ಕೊಳ್ಳತಕ್ಕದ್ದು.

- ನೇರ ಮತ್ತು ಪರೋಕ್ಷ ಮೀನುಗಾರಿಕೆಯಿಂದ ಶಾರ್ಕ್ ಮೀನುಗಳ ಉತ್ಪನ್ನ ಸಮರ್ಥನೀಯವಾಗಿದೆಯೋ ಎಂದು ನಿಶ್ಚಯಿಸುವುದು.
- ಶಾರ್ಕ್‌ಗಳ ಸಂಖ್ಯೆಯ ಮೇಲಿನ ಬೆದರಿಕೆಯನ್ನು ಗೊತ್ತುಪಡಿಸುವುದು, ನಿವಾಸ ಸ್ಥಳಗಳನ್ನು ನಿರ್ಧರಿಸುವುದು ಮತ್ತು ಅವುಗಳ ಸಂರಕ್ಷಣೆ ಮತ್ತು ಸ್ಥಿರವಾಗಿರುವ ಜೈವಿಕ ಸಂರಕ್ಷಣೆ ಮತ್ತು ವಿವೇಕವುಳ್ಳ ದೀರ್ಘ ಕಾಲದ ಆರ್ಥಿಕ ತತ್ವಗಳನ್ನು ಉಪಯೋಗಿಸುವುದು.
- ನಿರ್ಧಿಷ್ಟವಾಗಿ ದುರ್ಬಲವಾಗಿರುವ ಅಥವಾ ಬೆದರಿಕೆ ಇರುವ ಶಾರ್ಕ್ ದಾಸ್ತಾನುಗಳನ್ನು ಗುರುತಿಸುವುದು ಮತ್ತು ಅದರ ಮೇಲೆ ಗಮನ ಹರಿಸುವುದು.
- ಸಂಶೋಧನೆ, ನಿರ್ವಹಣೆ ಮತ್ತು ಶೈಕ್ಷಣಿಕ ಉಪಕ್ರಮಗಳನ್ನು ರಾಷ್ಟ್ರದ ಒಳಗೆ ಮತ್ತು ರಾಷ್ಟ್ರಗಳ ನಡುವೆ ತೆಗೆದುಕೊಳ್ಳುವ ಬಗ್ಗೆ ಎಲ್ಲಾ ಪಾಲುದಾರರ ಒಳಗೆ ಚೌಕಟ್ಟುಗಳನ್ನು ಸುಧಾರಿಸಿ ಅಭಿವೃದ್ಧಿಗೊಳಿಸಲು ಮತ್ತು ಸ್ಥಾಪಿಸಲು ಪರಿಣಾಮಕಾರಿಯಾದ ಸಹಕಾರ ನೀಡುವುದು.
- ಆಕಸ್ಮಿಕವಾಗಿ ದೊರಕುವ ಬಳಸಲು ಯೋಗ್ಯವಲ್ಲದ ಶಾರ್ಕ್‌ಗಳನ್ನು ಕಡಿಮೆ ಮಾಡುವುದು.
- ಜೀವ ವೈವಿಧ್ಯದ ರಕ್ಷಣೆ, ಪರಿಸರ ರಚನೆ ಮತ್ತು ಕಾರ್ಯಗಳ ಬಗ್ಗೆ ಕೊಡುಗೆ ನೀಡುವುದು
- ಶಾರ್ಕ್ ಉತ್ಪನ್ನದಿಂದ ಬರುವ ತ್ಯಾಜ್ಯ ಮತ್ತು ತ್ಯಜಿಸುವಿಕೆಯನ್ನು ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆ ಇದರ ಒಪ್ಪಂದದ ಕಲಮು 7.2.2 (ಜಿ) ರ ಪ್ರಕಾರ ಮಾಡುವುದು (ಉದಾಹರಣೆಗೆ ಶಾರ್ಕ್‌ಗಳನ್ನು ಅದರ ರೆಕ್ಕೆಗಳಿಂದ ಬಿಡಿಸುವುದು ಅಗತ್ಯ).
- ಮರಣ ಹೊಂದಿದ ಶಾರ್ಕ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸುವುದನ್ನು ಪ್ರೋತ್ಸಾಹಿಸುವುದು.

- ನಿರ್ಧಿಷ್ಟ ಜಾತಿಯ ಹಿಡುವಳಿ ಮತ್ತು ಇಳಿಯುವಿಕೆಗಳ ದತ್ತಾಂಶಗಳನ್ನು ಪಡೆಯುವಲ್ಲಿ ಅನುಕೂಲ ಮಾಡುವುದು ಮತ್ತು ಶಾರ್ಕ್ ಹಿಡುವಳಿಗಳ ಮೇಲ್ವಿಚಾರಣೆ ನೋಡಿ ಕೊಳ್ಳುವುದು.
- ನಿರ್ಧಿಷ್ಟ ಜಾತಿಯ ಶಾರ್ಕ್‌ಗಳನ್ನು ಗುರುತು ಹಚ್ಚುವಲ್ಲಿ ಅನುಕೂಲ ಮಾಡುವುದು ಮತ್ತು ಜೈವಿಕ ಹಾಗೂ ವ್ಯಾಪಾರಿ ದತ್ತಾಂಶಗಳನ್ನು ಸಂಗ್ರಹಿಸುವುದು.

23. ಶಾರ್ಕ್ ಯೋಜನೆಯನ್ನು ಅನುಷ್ಠಾನಗೊಳಿಸುವ ರಾಷ್ಟ್ರಗಳು ನಿಯಮಿತವಾಗಿ ಅಂದರೆ ಕನಿಷ್ಟ ಪ್ರತೀ 4 ವರ್ಷಗಳಿಗೊಮ್ಮೆಯಾದರೂ ಅದರ ಪರಿಣಾಮವನ್ನು ಹೆಚ್ಚಿಸುವ ಸಲುವಾಗಿ ವೆಚ್ಚ ಪರಿಣಾಮಕಾರಿ ವಿಧಾನಗಳನ್ನು ಪರಿಶೀಲಿಸತಕ್ಕದ್ದು.

24. ಯಾವುದೇ ರಾಷ್ಟ್ರಗಳು ಶಾರ್ಕ್ ಯೋಜನೆ ಅಗತ್ಯವಿಲ್ಲವೆಂದು ನಿರ್ಧರಿಸಿದಲ್ಲಿ, ಅಂತಹ ರಾಷ್ಟ್ರಗಳು ಅದರ ನಿರ್ಧಾರವನ್ನು ಆ ರಾಷ್ಟ್ರದ ಬದಲಾದ ಮೀನುಗಾರಿಕೆಯನ್ನು ಗಮನದಲ್ಲಿಟ್ಟುಕೊಂಡು ವಿಮರ್ಶೆ ಮಾಡುವುದು, ಆದರೆ ಕನಿಷ್ಟ ಉತ್ಪನ್ನಗಳ ದತ್ತಾಂಶ, ಇಳಿಯುವಿಕೆಗಳನ್ನು ಮತ್ತು ವ್ಯಾಪಾರಿ ದತ್ತಾಂಶಗಳನ್ನು ಸಂಗ್ರಹಿಸುವುದು.

25. ರಾಷ್ಟ್ರಗಳು ಅದರ ಸಾಮರ್ಥ್ಯಗಳ ಚೌಕಟ್ಟಿನೊಳಗೆ ಮತ್ತು ಸ್ಥಿರವಾದ ಅಂತರಾಷ್ಟ್ರೀಯ ಕಾನೂನಿಗೆ ಒಳಪಟ್ಟು ಪ್ರಾದೇಶಿಕ ಮತ್ತು ಉಪಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳ ಮೂಲಕ ಮತ್ತು ಇತರ ರೂಪಗಳ ಸಹಕಾರದೊಂದಿಗೆ ಶಾರ್ಕ್‌ಗಳ ದಾಸ್ತಾನುಗಳ ಸಂರಕ್ಷಣೆ ಮತ್ತು ಸೂಕ್ತವಾದಲ್ಲಿ ಪ್ರಾದೇಶಿಕ ಮತ್ತು ಉಪಪ್ರಾದೇಶಿಕ ಶಾರ್ಕ್ ಯೋಜನೆಯನ್ನು ಅಭಿವೃದ್ಧಿ ಪಡಿಸುವಲ್ಲಿ ಸಹಕಾರ ನೀಡುವುದು.

26. ಎಲ್ಲಿ ಗಡಿಯಾಚೆಯ, ವ್ಯಾಪಿಸಿಕೊಂಡಿರುವ ಮತ್ತು ಹೆಚ್ಚಾಗಿ ವಲಸೆಹೋಗುವ ಮತ್ತು ಸಾಗರದಾಚೆಯ ಶಾರ್ಕ್ ದಾಸ್ತಾನುಗಳನ್ನು ಎರಡು ಅಥವಾ ಹೆಚ್ಚು ರಾಷ್ಟ್ರಗಳು ಉಪಯೋಗಿಸಿ ಕೊಳ್ಳುತ್ತಿದ್ದಲ್ಲಿ, ಸಂಬಂಧಪಟ್ಟ ರಾಷ್ಟ್ರಗಳು ಶಾರ್ಕ್‌ಗಳ ಪರಿಣಾಮಕಾರಿ ಸಂರಕ್ಷಣೆ ಮತ್ತು ನಿರ್ವಹಣೆಯ ಪ್ರಯುಕ್ತ ವಿಶೇಷ ಪ್ರಯತ್ನವನ್ನು ಮಾಡತಕ್ಕದ್ದು.

27. ಅಂತಹ ರಾಷ್ಟ್ರಗಳು ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಹಕಾರದೊಂದಿಗೆ ಮತ್ತು ಅಂತರಾಷ್ಟ್ರೀಯ ವ್ಯವಸ್ಥೆಗಳ ಮೂಲಕ ಸಂಶೋಧನೆ, ತರಬೇತಿ ಮತ್ತು ಮಾಹಿತಿಗಳ ಉತ್ಪಾದನೆ ಮತ್ತು ಶಿಕ್ಷಣ ಸಾಮಾಗ್ರಿಗಳನ್ನು ನೀಡುವಲ್ಲಿ ವಿಶೇಷ ಪ್ರಯತ್ನವನ್ನು ಮಾಡತಕ್ಕದ್ದು.

28. ರಾಷ್ಟ್ರಗಳು ಆಹಾರ ಮತ್ತು ಕೃಷಿ ಸಂಸ್ಥೆಗೆ (FAO) ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆಯ ಬಗ್ಗೆ ಸಲ್ಲಿಸುವ ಅರ್ಧ–ವಾರ್ಷಿಕ ವರದಿಯಲ್ಲಿ ಶಾರ್ಕ್ ಯೋಜನೆಯ ಮೌಲ್ಯಮಾಪನದ ವರದಿ, ಅಭಿವೃದ್ಧಿ ಮತ್ತು ಅನುಷ್ಠಾನದ ವರದಿಯನ್ನು ಒಂದು ಭಾಗವಾಗಿ ಸಲ್ಲಿಸತಕ್ಕದ್ದು.

**ಆಹಾರ ಮತ್ತು ಕೃಷಿ ಸಂಸ್ಥೆ (FAO) ಇದರ ಪಾತ್ರ**

29. ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಮ್ಮೇಳನದಲ್ಲಿ ನಿರ್ದೇಶಿಸಿದಂತೆ ಮತ್ತು ತನ್ನ ಸಾಮಾನ್ಯ ಕಾರ್ಯಕ್ರಮದ ಚಟುವಟಿಕೆಗಳಡಿ IPOA-SHARKS ಯೋಜನೆಯ ಅನುಷ್ಠಾನದ ಬಗ್ಗೆ ಶಾರ್ಕ್ ಯೋಜನೆಯನ್ನು ತಯಾರಿಸುವುದಕ್ಕೆ ಎಲ್ಲಾ ರಾಷ್ಟ್ರಗಳಿಗೆ ಸಹಾಯ ಮಾಡುತ್ತದೆ.

**30.** ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಮ್ಮೇಳನದಲ್ಲಿ ನಿರ್ದೇಶಿಸಿದಂತೆ IPOA-SHARKS ಯೋಜನೆಯ ಅಭಿವೃದ್ಧಿ ಮತ್ತು ಅನುಷ್ಠಾನದ ಬಗ್ಗೆ ರಾಷ್ಟ್ರಗಳಿಗೆ ನಿರ್ಧಿಷ್ಟ ಕಾರ್ಯಕ್ರಮದ ಮೂಲಕ ರಾಷ್ಟ್ರದ ತಾಂತ್ರಿಕ ಸಹಾಯಧನದ ಯೋಜನೆಗಳ ಮೂಲಕ ತನ್ನ ಸಾಮಾನ್ಯ ಕಾರ್ಯಕ್ರಮಗಳ ನಿಧಿಯಿಂದ ಮತ್ತು ಸಂಸ್ಥೆಗೆ ಇಂತಹ ಉದ್ದೇಶಗಳಿಗಾಗಿ ಒದಗಿಸಿರುವ ಹೆಚ್ಚುವರಿ ಅನುದಾನದ ನಿಧಿಯಿಂದ ಸಹಾಯ ಮಾಡುವುದು. ಆಹಾರ ಮತ್ತು ಕೃಷಿ ಸಂಸ್ಥೆ (FAO) ಶಾರ್ಕ್ ಯೋಜನೆಯನ್ನು ಅಭಿವೃದ್ಧಿಗೊಳಿಸುವ ರಾಷ್ಟ್ರಗಳಿಗೆ ತಜ್ಞರ ಪಟ್ಟಿ ಮತ್ತು ಯಾಂತ್ರಿಕ ಕೌಶಲ್ಯದ ತಾಂತ್ರಿಕ ನೆರವನ್ನು ಒದಗಿಸುತ್ತದೆ.

31. IPOA-SHARKS ನ ಅನುಷ್ಟಾನದ ಪ್ರಗತಿ ಬಗ್ಗೆ COFI ಮೂಲಕ ಅರ್ಧ–ವಾರ್ಷಿಕ ವರದಿಯನ್ನು ಪ್ರಕಟಿಸುವುದು.

**ಅನುಬಂಧ –ಅ**

## ಶಾರ್ಕ್ ಯೋಜನೆಯ ಬಗ್ಗೆ ಸೂಚಿಸಿರುವ ವಿಷಯಗಳು

### 1. ಹಿನ್ನೆಲೆ

ಮೀನುಗಾರಿಕೆಯಲ್ಲಿ ಶಾರ್ಕ್‌ನ ನಿರ್ವಹಣೆ ಮಾಡುವಾಗ ಮುಖ್ಯವಾಗಿ ಶಾರ್ಕ್ ಬಗ್ಗೆ ಇರುವ ಜ್ಞಾನ ಮತ್ತು ಶಾರ್ಕ್ ಮೀನು ಹಿಡಿಯಲು ಉಪಯೋಗಿಸುವ ವಿಧಾನಗಳು, ಅದರ ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ಈ ಕೆಳಗಿನ ತೊಂದರೆಗಳನ್ನು ನಿರ್ಧಿಷ್ಟವಾಗಿ ಕಾಣಬಹುದಾಗಿದೆ.

- ಜೀವಿ ವರ್ಗೀಕರಣದ ತೊಂದರೆಗಳು
- ಶಾರ್ಕ್ ದೊರೆಯುವ ಬಗ್ಗೆ, ಪ್ರಯತ್ನದ ಬಗ್ಗೆ ಮತ್ತು ಇಳಿಯುವಿಕೆಗಳ ಬಗ್ಗೆ ಸಾಕಾಷ್ಟು ಮಾಹಿತಿ ಇಲ್ಲದಿರುವುದು
- ಇಳಿಯುವಿಕೆ ಆದ ನಂತರ ಶಾರ್ಕ್ ಜಾತಿಯನ್ನು ಗುರುತಿಸುವಲ್ಲಿ ಇರುವ ತೊಂದರೆ.
- ಜೈವಿಕ ಮತ್ತು ಪರಿಸರದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದು
- ಶಾರ್ಕ್‌ನ ಸಂಶೋಧನೆ ಮತ್ತು ನಿರ್ವಹಣೆ ಬಗ್ಗೆ ಅನುದಾನ ಇಲ್ಲದಿರುವುದು.
- ಗಡಿಯಾಚೆಯ, ವ್ಯಾಪಿಸಿಕೊಂಡಿರುವ ಮತ್ತು ಹೆಚ್ಚಾಗಿ ವಲಸೆಹೋಗುವ ಮತ್ತು ಸಾಗರದಾಚೆಗೆ ಲಭ್ಯವಿರುವ ಶಾರ್ಕ್ ದಾಸ್ತಾನುಗಳು.
- ಬಹುಜಾತಿಯ ಮೀನುಗಾರಿಕೆಯಲ್ಲಿ ಶಾರ್ಕ್ ಮೀನುಗಳು ಕೂಡಾ ಹಿಡಿಯಲ್ಪಡುವುದರಿಂದ ಶಾರ್ಕ್ ನಿರ್ವಹಣೆಯ ಗುರಿಗಳನ್ನು ಸಾಧಿಸಲು ಕಷ್ಟವಾಗಿದೆ.

### II. ಶಾರ್ಕ್ ಯೋಜನೆಯ ವಿಷಯಗಳು

ಶಾರ್ಕ್ ಯೋಜನೆಯಲ್ಲಿ ಶಾರ್ಕ್‌ನ ಸಂರಕ್ಷಣೆ ಮತ್ತು ನಿರ್ವಹಣೆಯ ಬಗ್ಗೆ ಆಹಾರ ಮತ್ತು ಕೃಷಿ ಸಂಸ್ಥೆಯು (FAO) ಅಭಿವೃದ್ಧಿ ಪಡಿಸಿದ ತಾಂತ್ರಿಕ ಮಾರ್ಗಸೂಚಿಗಳು ಮತ್ತು ಅನುಷ್ಠಾನ, ಈ ಎರಡು ಅಂಶಗಳ ಬಗ್ಗೆ ವಿವರವಾದ ತಾಂತ್ರಿಕ ಮಾರ್ಗದರ್ಶನಗಳನ್ನು ಕೊಡಲಾಗಿದೆ. ಇವುಗಳ ಮೇಲೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

- ಮೇಲ್ವಿಚಾರಣೆ
- ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ
- ಸಂಶೋಧನೆ
- ಮಾನವ ಸಂಪನ್ಮೂಲಗಳನ್ನು ನಿರ್ಮಿಸುವುದು
- ನಿರ್ವಹಣಾ ಕ್ರಮಗಳನ್ನು ಅನುಷ್ಠಾನಗೊಳಿಸುವುದು

ಶಾರ್ಕ್ ಯೋಜನೆಯು ಈ ಕೆಳಗಿನವುಗಳನ್ನು ಹೊಂದಿರತಕ್ಕದ್ದು

ಅ. ಚಾಲ್ತಿಯಲ್ಲಿರುವ ಸ್ಥಿತಿಗಳ ಬಗ್ಗೆ ವಿವರಗಳು

- ಶಾರ್ಕ್‌ನ ದಾಸ್ತಾನು, ಸಂಖ್ಯೆ
- ಸಂಬಂಧಿಸಿದ ಮೀನುಗಾರಿಕೆ
- ನಿರ್ವಹಣೆಯ ಚೌಕಟ್ಟು ಮತ್ತು ಅದರ ಜಾರಿ

ಬ. ಶಾರ್ಕ್ ಯೋಜನೆಯ ಉದ್ದೇಶಗಳು

ಕ. ಉದ್ದೇಶಗಳನ್ನು ನೆರವೇರಿಸಲು ತಂತ್ರಗಳು: ಯಾವುದನ್ನು ಸಾಧಿಸಬಹುದು ಎಂಬ ಬಗ್ಗೆ ಈ ಕೆಳಗಿನವುಗಳು ವಿವರಾತ್ಮಕ ಉದಾಹಣೆಗಳಾಗಿವೆ.

- ಶಾರ್ಕ್ ದಾಸ್ತಾನು ಇರುವ ಪ್ರದೇಶಗಳಿಗೆ ಮೀನುಗಾರಿಕಾ ನೌಕೆಗಳು ಪ್ರವೇಶಿಸುವುದನ್ನು ನಿಯಂತ್ರಣ ಮಾಡುವುದು
- ಯಾವುದೇ ಶಾರ್ಕ್‌ಗಳ ಹಿಡಿಯುುವಿಕೆಯು ನಿಯಂತ್ರಣದಲ್ಲಿ ಇಲ್ಲದೇ ಇದ್ದ ಪಕ್ಷದಲ್ಲಿ ಅದರ ಮೀನುಗಾರಿಕಾ ಪ್ರಯತ್ನವನ್ನು ಕಡಿಮೆ ಮಾಡುವುದು.
- ಹಿಡಿದ ಶಾರ್ಕ್‌ಗಳ ಬಳಕೆಯನ್ನು ಸುಧಾರಣೆ ಮಾಡುವುದು
- ದತ್ತಾಂಶ ಸಂಗ್ರಹಣೆಯಲ್ಲಿ ಸುಧಾರಣೆ ಮಾಡುವುದು ಮತ್ತು ಶಾರ್ಕ್ ಮೀನುಗಾರಿಕೆಯ ಮೇಲ್ವಿಚಾರಣೆ ಮಾಡುವುದು.
- ಶಾರ್ಕ್ ಜಾತಿಗಳನ್ನು ಗುರುತಿಸುವಲ್ಲಿ ಸಂಬಂಧಪಟ್ಟ ಎಲ್ಲರಿಗೂ ತರಬೇತಿ ನೀಡುವುದು
- ಅಲ್ಪ–ಸ್ವಲ್ಪ ತಿಳಿದಿರುವ ಶಾರ್ಕ್ ಜಾತಿಯ ಮೇಲೆ ಸಂಶೋಧನೆಯನ್ನು ನಡೆಸುವುದು
- ಶಾರ್ಕ್ ಜಾತಿಗಳನ್ನು ಬಳಸುವ ಬಗ್ಗೆ ಮತ್ತು ವ್ಯಾಪಾರಿ ದತ್ತಾಂಶಗಳ ಬಗ್ಗೆ ಮಾಹಿತಿ ಪಡೆಯುುವುದು.

## ಶಾರ್ಕ್‌ನ ಮೌಲ್ಯಮಾಪನದ ಬಗ್ಗೆ ಸೂಚಿಸಿದ ವಿಷಯಗಳು

ಶಾರ್ಕ್‌ನ ಮೌಲ್ಯಮಾಪನದ ವರದಿಯಲ್ಲಿ ಈ ಕೆಳಗಿನ ಮಾಹಿತಿಗಳನ್ನು ಸೇರಿಸಿಕೊಳ್ಳತಕ್ಕದ್ದು.

- ಹಿಂದಿನ ಮತ್ತು ಈಗಿನ ಪರಿಸ್ಥಿತಿಗಳು
  - ಪರಿಣಾಮ: ನೇರ ಮತ್ತು ಪರೋಕ್ಷ ಮೀನುಗಾರಿಕೆ ಮತ್ತು ಎಲ್ಲಾ ವಿಧದ ಮೀನುಗಾರಿಕೆ
  - ಇಳುವರಿ: ಭೌತಿಕ ಮತ್ತು ಆರ್ಥಿಕ
- ದಾಸ್ತಾನುಗಳ ಸ್ಥಿತಿಗತಿ
- ಪ್ರಸ್ತುತ ಇರುವ ನಿರ್ವಹಣಾ ಕ್ರಮಗಳು
  - ಮೀನುಗಾರಿಕಾ ಪ್ರದೇಶಗಳಿಗೆ ಹೋಗುವ ಬಗ್ಗೆ ನಿಯಂತ್ರಣ
  - ತಾಂತ್ರಿಕ ಕ್ರಮಗಳು (ಉಪ–ಉತ್ಪನ್ನ ಕಡಿಮೆ ಮಾಡುವ ಕ್ರಮಗಳು, ಮೀನುಗಳ ಆಶ್ರಯಸ್ಥಾನದ ಗುರುತಿಸುವಿಕೆ ಮತ್ತು ಮುಚ್ಚಲ್ಪಟ್ಟ ಮೀನುಗಾರಿಕಾ ಋತುಗಳು)
  - ಇತರ
  - ಮೇಲ್ವಿಚಾರಣೆ, ನಿಯಂತ್ರಣ ಮತ್ತು ಕಣ್ಗಾವಲು
- ನಿರ್ವಹಣಾ ಕ್ರಮಗಳ ಮೇಲಿನ ಪರಿಣಾಮಕತ್ವ
- ನಿರ್ವಹಣಾ ಕ್ರಮಗಳ ಮೇಲೆ ಅಗತ್ಯವಿರುವ ಮಾರ್ಪಾಡುಗಳು

## ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆ

### ಪರಿಚಯ

1. ಸಂದರ್ಭಕ್ಕನುಸಾರವಾಗಿ ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆಯ ಒಟ್ಟಾರೆ ಉದ್ದೇಶ, ಸಮರ್ಥನೀಯ ಮೀನುಗಾರಿಕೆಯಾಗಿದೆ. ಪ್ರಪಂಚದ ಮೀನುಗಾರಿಕೆಯಲ್ಲಿ ಮೀನುಗಾರಿಕಾ ಸಾಮರ್ಥ್ಯ ಹೆಚ್ಚುತ್ತಿರುವುದು ಕಾಳಜಿಯನ್ನುಂಟು ಮಾಡುವ ವಿಷಯವಾಗಿದೆ. ಹೆಚ್ಚಾಗಿರುವ ಮೀನುಗಾರಿಕಾ ಸಾಮರ್ಥ್ಯವು ಇತರ ವಿಷಯಗಳೊಂದಿಗೆ ಗಣನೀಯವಾಗಿ ಅತಿಯಾದ ಮೀನುಗಾರಿಕೆಗೆ, ಸಮುದ್ರ ಮೀನುಗಾರಿಕೆಯ ಸಂಪನ್ಮೂಲಗಳ ಅವನತಿಗೆ, ಆಹಾರ ಉತ್ಪಾದನಾ ಸಾಮರ್ಥ್ಯದ ಕುಸಿತ ಮತ್ತು ಗಮನಾರ್ಹವಾಗಿ ಆರ್ಥಿಕತೆಯನ್ನು ಹಾಳು ಮಾಡುತ್ತಿದೆ.

2. ಅತಿಯಾದ ಮೀನುಗಾರಿಕೆಯನ್ನು ತಡೆಯಲು ಅಥವಾ ನಿರ್ಮೂಲನ ಮಾಡಲು ರಾಷ್ಟ್ರಗಳು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ನೀತಿ ಸಂಹಿತೆಯು ತಿಳಿಸುತ್ತದೆ.

3. 1997 ರಲ್ಲಿ ನಡೆದ ಮೀನುಗಾರಿಕಾ ಸಮಿತಿಯ (COFI) ಅಧಿವೇಶನದಲ್ಲಿ ಆಹಾರ ಮತ್ತು ಕೃಷಿ ಸಂಸ್ಥೆಯನ್ನು (FAO) ಮೀನುಗಾರಿಕಾ ಸಾಮರ್ಥ್ಯದ ಸಮಸ್ಯೆಯನ್ನು ತೆಗೆದುಕೊಳ್ಳುವಂತೆ ವಿನಂತಿಸಿತು. ಆಹಾರ ಮತ್ತು ಕೃಷಿ ಸಂಸ್ಥೆಯು (FAO) ಲಾ ಜೊಲ್ಲಾ, ಯು.ಎಸ್.ಎ. ಇಲ್ಲಿ 1998 ಏಪ್ರಿಲ್ 15 ರಿಂದ 18ರ ವರೆಗೆ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆ ಬಗ್ಗೆ ತಾಂತ್ರಿಕ ಸಮಿತಿ ಸಭೆಯನ್ನು ಸಂಘಟಿಸಿತು. ಆಹಾರ ಮತ್ತು ಕೃಷಿ ಸಂಸ್ಥೆಯು (FAO) 1998 ಅಕ್ಟೋಬರ್ 26 ರಿಂದ 30 ರ ವರೆಗೆ ರೋಮ್‌ನಲ್ಲಿ ನಂತರದ ಸಮಾಲೋಚನೆಯನ್ನು ಕೂಡಾ ನಡೆಸಿತು ಮತ್ತು ಅದರ ಮೊದಲು 1998 ಜುಲಾಯಿ 22 ರಿಂದ 24 ರ ವರೆಗೆ ಅದರ ಪ್ರಾಥಮಿಕ ಸಭೆಯನ್ನು ನಡೆಸಿತು.

### ಭಾಗ–I – ಅಂತರಾಷ್ಟ್ರೀಯ ಕ್ರಿಯಾ ಯೋಜನೆಯ ಪ್ರಕೃತಿ ಮತ್ತು ವ್ಯಾಪ್ತಿ

4. ಅಂತರಾಷ್ಟ್ರೀಯ ಕ್ರಿಯಾ ಯೋಜನೆಯು ಸ್ವಯಂ ಪ್ರೇರಿತವಾಗಿದ್ದು, ಇದನ್ನು ವಿಸ್ತಾರವಾಗಿ ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆಯ ಕಲಮು 2(ಡಿ) ಇದರ ಚೌಕ್ಕಟ್ಟಿನೊಳಗೆ ರಚಿಸಲಾಗಿದೆ. ನೀತಿ ಸಂಹಿತೆಯ ಕ್ರಮಸಂಖ್ಯೆ 3 ರಲ್ಲಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆಯ ವ್ಯಾಖ್ಯಾನ ಮತ್ತು ಇದು ಯಾರಿಗೆ ಅನ್ವಯಿಸುತ್ತದೆ ಮತ್ತು ಇತರ ಅಂತರಾಷ್ಟ್ರೀಯ ಸಾಧನಗಳ ಸಂಬಂಧವನ್ನು ತಿಳಿಸುತ್ತದೆ.

5. ಈ ದಾಖಲೆಯು ನೀತಿ ಸಂಹಿತೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಎಲ್ಲಾ ರಾಷ್ಟ್ರಗಳು ಒಪ್ಪಿಕೊಂಡಿರುವ ವಿಷಯದ ಮುಂದುವರಿಕೆಯಾಗಿದೆ.[7] ರಾಷ್ಟ್ರಗಳು ಮತ್ತು

---

7 ಈ ದಾಖಲೆಯಲ್ಲಿ "ರಾಷ್ಟ್ರ" ಇದು ಆಹಾರ ಮತ್ತು ಕೃಷಿ ಸಂಸ್ಥೆಯ ಸದಸ್ಯರು ಮತ್ತು ಸದಸ್ಯರಲ್ಲದವರು ಮತ್ತು ಅವಶ್ಯ ಬದಲಾವಣೆಯೊಂದಿಗೆ ರಾಷ್ಟ್ರಗಳು ಅಲ್ಲದೆ "ಮೀನುಗಾರಿಕಾ ಘಟಕಗಳು" ಕೂಡಾ ಸೇರಿರುತ್ತದೆ.

ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳು[8] ಈ ದಾಖಲೆಯನ್ನು ಸತತವಾಗಿ ಅಂತರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ ಮತ್ತು ಆಯಾ ರಾಷ್ಟ್ರಗಳ ಸಾಮರ್ಥ್ಯಗಳ ಚೌಕಟ್ಟಿನೊಳಗೆ ಸಂಬಂಧಪಟ್ಟ ಸಂಸ್ಥೆಗಳ ಮೂಲಕ ನಿರ್ವಹಿಸತಕ್ಕದ್ದು.

6. ಅಂತರಾಷ್ಟ್ರೀಯ ಕ್ರಿಯಾ ಯೋಜನೆಯು ಮೀನುಗಾರಿಕಾ ಸಂರಕ್ಷಣೆ ಮತ್ತು ಸುಸ್ಥಿರ ನಿರ್ವಹಣೆಯ ಅಂಶವನ್ನು ಹೊಂದಿರುತ್ತದೆ.

## ಭಾಗ-II. **ಉದ್ದೇಶಗಳು ಮತ್ತು ತತ್ವಗಳು**

7. ಅಂತರಾಷ್ಟ್ರೀಯ ಕ್ರಿಯಾ ಯೋಜನೆಯ ತಕ್ಷಣದ ಉದ್ದೇಶವು, ದೇಶಿಯ ಮತ್ತು ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳಿಗೆ ವಿಶ್ವಾದಾದ್ಯಂತ ಅದನ್ನು ಸಾಧಿಸಲು 2003 ರಲ್ಲಿ ಮುಂದಿಡುವುದು, ಆದರೆ 2005 ರ ನಂತರ ಅಲ್ಲ. ದಕ್ಷ, ನ್ಯಾಯಸಮ್ಮತ ಮತ್ತು ಪಾರದರ್ಶಕವಾಗಿ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯನ್ನು ಮಾಡುವುದು. ರಾಷ್ಟ್ರಗಳು ಮತ್ತು ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳು ಹೆಚ್ಚಿನ ಸಾಮರ್ಥ್ಯದ ಸಮಸ್ಯೆಯನ್ನು ಎದುರಿಸುತ್ತಿವೆ, ಅಲ್ಲಿ ಸಾಮರ್ಥ್ಯವನ್ನು ತಗ್ಗಿಸಿ ದೀರ್ಘಕಾಲದ ಸಂರಕ್ಷಣೆಯ ಫಲಿತಾಂಶಗಳ ಸಾಧನೆಯನ್ನು, ಆರಂಭದಲ್ಲಿ ಪ್ರಸ್ತುತ ಮಟ್ಟದಲ್ಲಿರುವ ಮಿತಿಯನ್ನು ಇಟ್ಟುಕೊಳ್ಳುವಂತೆ ಪ್ರಯತ್ನಿಸುವುದು ಮತ್ತು ಯಾವ ಪ್ರದೇಶ ಮೀನುಗಾರಿಕೆಗೆ ಪೀಡಿತವಾಗಿದೆಯೋ ಅಲ್ಲಿ ಮೀನುಗಾರಿಕಾ ಸಾಮರ್ಥ್ಯವನ್ನು ಹಂತ ಹಂತವಾಗಿ ಕಡಿಮೆ ಮಾಡುವುದು, ಎಲ್ಲಿ ದೀರ್ಘ ಕಾಲದ ಸ್ಥಿರತೆಯ ಫಲಿತಾಂಶವನ್ನು ಸಾಧಿಸಲಾಗಿದೆಯೋ ಅಲ್ಲಿ ರಾಷ್ಟ್ರಗಳು ಮತ್ತು ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳು ಆ ಬೆಳವಣಿಗೆಯನ್ನು ಮತ್ತು ಸಾಮರ್ಥ್ಯವನ್ನು ಶಿಥಿಲಗೊಳಿಸುವುದನ್ನು ತಪ್ಪಿಸಲು ದೀರ್ಘಕಾಲದ ಸಂರಕ್ಷಣಾ ಉದ್ದೇಶಗಳನ್ನು ಕೈಗೊಳ್ಳುವುದು.

8. ಮೇಲಿನ ಉದ್ದೇಶಗಳನ್ನು ಹಂತಹಂತವಾಗಿ ಸಾಧಿಸಲು ನಾಲ್ಕು ಮುಖ್ಯವಾದ ತಂತ್ರಗಳನ್ನು ಉಪಯೋಗಿಸ ಬಹುದಾಗಿದೆ.

i) ರಾಷ್ಟ್ರೀಯ, ಪ್ರಾದೇಶಿಕ ಮತ್ತು ಜಾಗತಿಕವಾಗಿ ಮೀನಿನ ಸಾಮರ್ಥ್ಯಗಳ ಮೌಲ್ಯಮಾಪನವನ್ನು ಮಾಡುವುದು ಮತ್ತು ಮೀನುಗಾರಿಕಾ ಸಾಮರ್ಥ್ಯದ ಮೇಲ್ವಿಚಾರಣೆಯನ್ನು ಹೆಚ್ಚಿಸುವುದು.

ii) ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಪರಿಣಾಮಕಾರಿಯಾಗಿ ತಯಾರಿಸುವ ಬಗ್ಗೆ, ಅನುಷ್ಠಾನಗೊಳಿಸುವ ಬಗ್ಗೆ ಮತ್ತು ಕರಾವಳಿ ಮೀನುಗಾರಿಕೆಯಲ್ಲಿ ಎಲ್ಲಿ ಅಗತ್ಯವಿದೆಯೋ ಅಲ್ಲಿ ತಕ್ಷಣ ತುರ್ತು ಕ್ರಮಗಳನ್ನು ಜರಗಿಸುವುದು.

iii) ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳನ್ನು ಬಲಪಡಿಸುವುದು ಮತ್ತು ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಮೀನುಗಾರಿಕಾ ಸಾಮರ್ಥ್ಯವನ್ನು ನಿರ್ವಹಿಸಲು ಸುಧಾರಿತ ಮಾಪನಗಳನ್ನು ಗೊತ್ತುಪಡಿಸುವುದು.

---

8 ಈ ದಾಖಲೆಯಲ್ಲಿ "ಪ್ರಾದೇಶಿಕ" ಎಂದರೆ ಉಪ-ಪ್ರಾದೇಶಿಕವನ್ನು ಕೂಡಾ ಸೇರಿಸುವುದು ಸೂಕ್ತವಾಗಿರುತ್ತದೆ.

iv) ಮುಖ್ಯವಾಗಿ ಗಡಿಯಾಚೆಯ, ವ್ಯಾಪಿಸಿಕೊಂಡಿರುವ ಮತ್ತು ಹೆಚ್ಚಾಗಿ ವಲಸೆಹೋಗುವ ಮತ್ತು ಸಾಗರದಾಚೆಗೆ ಲಭ್ಯವಿರುವ ಮೀನುಗಾರಿಕೆಯ ಬಗ್ಗೆ ಅಗತ್ಯವಾಗಿ ಬೇಕಾದ ತುರ್ತು ಮಾಪನಗಳನ್ನು ಅಳವಡಿಸುವುದು.

ಮೇಲಿನ ತಂತ್ರ ಜ್ಞಾನಗಳನ್ನು ಅನುಷ್ಠಾನಗೊಳಿಸುವಲ್ಲಿ ಪೂರಕ ಯಾಂತ್ರಿಕ ಕೌಶಲ್ಯ ಮತ್ತು ರಾಷ್ಟ್ರೀಯ ಕ್ರಿಯಾ ಯೋಜನೆಯ ಅನುಷ್ಠಾನವನ್ನು ಪ್ರಚಾರ ಮಾಡುವ ಸಲುವಾಗಿ ಅರಿವು ಮೂಡಿಸುವುದು ಮತ್ತು ಶಿಕ್ಷಣ, ಅಂತರಾಷ್ಟ್ರೀಯ ಮಟ್ಟದಲ್ಲಿ ತಾಂತ್ರಿಕ ಸಹಕಾರ ಮತ್ತು ಸಂಯೋಜನೆಯನ್ನು ಮಾಡುವುದು.

9. ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯು ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆಯ ಆಧಾರಿತವಾಗಿರಬೇಕು ಮತ್ತು ಈ ಕೆಳಗಿನ ಮುಖ್ಯವಾದ ತತ್ವಗಳನ್ನು ಮತ್ತು ವಿಧಾನಗಳನ್ನು ಪರಿಗಣಿಸತಕ್ಕದ್ದು.

i) **ಭಾಗವಹಿಸುವಿಕೆ:** ಅಂತರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ರಾಷ್ಟ್ರಗಳು ನೇರವಾಗಿ ಮತ್ತು ಇತರ ರಾಷ್ಟ್ರಗಳ ಸಹಕಾರದೊಂದಿಗೆ ಅಥವಾ ಆಹಾರ ಮತ್ತು ಕೃಷಿ ಸಂಸ್ಥೆ (FAO) ಮತ್ತು ಇತರ ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳನ್ನು ಸೇರಿಸಿ ಸೂಕ್ತ ಅಂತರ್‌–ಸರ್ಕಾರಿ ಸಂಸ್ಥೆಗಳೊಂದಿಗೆ ಅನುಷ್ಠಾನಗೊಳಿಸತಕ್ಕದ್ದು. ರಾಷ್ಟ್ರಗಳು ಮತ್ತು ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳನ್ನು ಪರಿಗಣಿಸಿ ಅದಕ್ಕೆ ತಕ್ಕಂತೆ ಪರಿಣಾಮವನ್ನು ನೀಡಲು ಪ್ರೋತ್ಸಾಹಿಸುವುದು ಮತ್ತು ತೆಗೆದುಕೊಂಡ ಕ್ರಮದ ಬಗ್ಗೆ ಆಹಾರ ಮತ್ತು ಕೃಷಿ ಸಂಸ್ಥೆಗೆ (FAO) ತಿಳಿಸತಕ್ಕದ್ದು. ಆಹಾರ ಮತ್ತು ಕೃಷಿ ಸಂಸ್ಥೆಯು (FAO) ಇದರ ಅನುಷ್ಠಾನದ ಬಗ್ಗೆ ಮಾಹಿತಿಯನ್ನು ಒದಗಿಸುವುದು.

ii) **ಹಂತ ಹಂತವಾದ ಅನುಷ್ಠಾನ:** ರಾಷ್ಟ್ರೀಯ ಮತ್ತು ಪ್ರಾದೇಶಿಕ ಯೋಜನೆಯಡಿ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯನ್ನು ಈ ಕೆಳಗಿನ 3 ಹಂತಗಳಲ್ಲಿ ಸಾಧಿಸ ಬಹುದಾಗಿದೆ. ಮೌಲ್ಯಮಾಪನ ಮತ್ತು ಅದಕ್ಕೆ ಬೇಕಾದ ಪರಿಹಾರ (ಪ್ರಾಥಮಿಕ ವಿಶ್ಲೇಷಣೆಯನ್ನು 2000 ದ ಅಂತ್ಯದೊಳಗಾಗಿ ಪೂರ್ಣಗೊಳಿಸತಕ್ಕದ್ದು.) ನಿರ್ವಹಣಾ ಕ್ರಮಗಳನ್ನು ಅಳವಡಿಸಿಕೊಳ್ಳುವುದು (ಪ್ರಾಥಮಿಕ ಕ್ರಮಗಳನ್ನು 2002ರ ಅಂತ್ಯದೊಳಗಾಗಿ ಅಳವಡಿಸಿಕೊಳ್ಳತಕ್ಕದ್ದು) ಮತ್ತು ಆವರ್ತಕ ಹೊಂದಾಣಿಕೆಗೆ ಬೇಕಾದ ಮೌಲ್ಯಮಾಪನವನ್ನು ಮತ್ತು ಅದಕ್ಕೆ ಬೇಕಾದ ಸೂಕ್ತ ಪರಿಹಾರಗಳನ್ನು ಅಳವಡಿಸಿಕೊಳ್ಳುವುದು. ರಾಷ್ಟ್ರೀಯ ಮತ್ತು ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳು ಈ ಕ್ರಮಗಳನ್ನು ಸಂಪೂರ್ಣಗೊಳಿಸತಕ್ಕದ್ದು ಮತ್ತು ಹಂತ ಹಂತವಾಗಿ 2005 ರ ಒಳಗಾಗಿ ಅಂತರಾಷ್ಟ್ರೀಯ ಕ್ರಿಯಾ ಯೋಜನೆಯಲ್ಲಿ ನಿರ್ಧಿಷ್ಟಪಡಿಸಿದ ಪೂರಕ ಕ್ರಮಗಳನ್ನು ಜಾರಿಗೆ ತರತಕ್ಕದ್ದು.

iii) **ಸಮಗ್ರ ವಿಧಾನ:** ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಮರ್ಥ್ಯ ಬಾಧಿಸುವ ಎಲ್ಲಾ ಸಂಗತಿಗಳನ್ನು ಪರಿಗಣಿಸ ತಕ್ಕದ್ದು.

iv) **ಸಂರಕ್ಷಣೆ:** ಸಂರಕ್ಷಣೆ ಮತ್ತು ಮೀನಿನ ದಾಸ್ತಾನಿನ ಸುಸ್ಥಿರ ಬಳಕೆ ಮತ್ತು ಕಡಲ ಪರಿಸರವನ್ನು ಸ್ಥಿರವಾದ ಮಾರ್ಗವನ್ನು ಉಪಯೋಗಿಸಿ ಮುನ್ನೆಚ್ಚರಿಕೆಯ ನಿಲುವನ್ನು ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯಲ್ಲಿ ವಿನ್ಯಾಸಗೊಳಿಸುವುದು, ಉಪ–ಉತ್ಪನ್ನಗಳನ್ನು ಕಡಿಮೆ ಮಾಡುವ ಅಗತ್ಯತೆ, ತ್ಯಾಜ್ಯ ಮತ್ತು ತ್ಯಜಿಸುವಿಕೆ, ಮತ್ತು ಪರಿಸರ ಸುರಕ್ಷಿತ ಮೀನುಗಾರಿಕಾ ವಿಧಾನಗಳು, ನಿವಾಸಸ್ಥಾನಗಳ ರಕ್ಷಣೆ, ಅದರಲ್ಲೂ ನಿರ್ಧಿಷ್ಟ ನಿವಾಸಸ್ಥಾನಗಳ ಮೇಲೆ ವಿಶೇಷ ಕಾಳಜಿ.

v) **ಆದ್ಯತೆ:** ನಿಸ್ಸಂದೇಹವಾಗಿ ಎಲ್ಲಿ ಅತಿಯಾದ ಮೀನುಗಾರಿಕೆ ಈಗಾಗಲೇ ಅಸ್ತಿತ್ವದಲ್ಲಿ ಇದೆಯೋ ಅಲ್ಲಿ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಗೆ ಆದ್ಯತೆ ನೀಡತಕ್ಕದ್ದು.

vi) **ಹೊಸ ತಂತ್ರಜ್ಞಾನಗಳು:** ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯನ್ನು ಮಾಡುವಲ್ಲಿ ಹೇಗೆ ವಿನ್ಯಾಸವನ್ನು ಮಾಡಬೇಕೆಂದರೆ ಅದು ಪರಿಸರ ಪ್ರೇಮಿಯಾಗಿರ ಬೇಕು ಮತ್ತು ವಿಕಾಸದ ತಂತ್ರಜ್ಞಾನವನ್ನು ಎಲ್ಲಾ ಪ್ರದೇಶಗಳಲ್ಲಿ ಹಿಡಿಯುವ ಮೀನುಗಾರಿಕೆಯಲ್ಲಿ ಅಳವಡಿಸಿಕೊಳ್ಳತಕ್ಕದ್ದು.

vii) **ಚಲನ ಶೀಲತೆ:** ಮೀನುಗಾರಿಕಾ ಸಾಮರ್ಥ್ಯಗಳ ನಿರ್ವಹಣೆಯನ್ನು ಮತ್ತು ಇದರಿಂದ ಮೀನುಗಾರಿಕಾ ಸಾಮರ್ಥ್ಯವನ್ನು ಉತ್ತಮವಾಗಿ ಉಪಯೋಗಿಸುವುದನ್ನು ಪ್ರೋತ್ಸಾಹಿಸಬೇಕು ಮತ್ತು ಚಲನಶೀಲತೆಯನ್ನು ವಿರೋಧಿಸಬೇಕು ಯಾಕೆಂದರೆ ಅದು ಸಂರಕ್ಷಣೆಯ ಮೇಲೆ ಋಣಾತ್ಮಕವಾದ ಪ್ರಭಾವ ಬೀರಬಹುದಾಗಿದೆ. ಮತ್ತು ಇದರಿಂದಾಗಿ ಮೀನುಗಾರಿಕೆಯ ಸಾಮಾಜಿಕ–ಆರ್ಥಿಕ ವ್ಯವಸ್ಥೆಯ ಮೇಲೆ ಬೀರಬಹುದಾದ ಪರಿಣಾಮಗಳಿಗೆ ಕಾರಣವನ್ನು ತಿಳಿಯತಕ್ಕದ್ದು.

viii) **ಪಾರದರ್ಶಕತೆ:** ಅಂತರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ನೀತಿ ಸಂಹಿತೆಯ ಕಲಮು 6.13 ರ ಪ್ರಕಾರ ಪಾರದರ್ಶಕ ರೀತಿಯಲ್ಲಿ ಕಾರ್ಯಗತಗೊಳಿಸತಕ್ಕದ್ದು.

10. ಅಂತರಾಷ್ಟ್ರೀಯ ಕ್ರಿಯಾ ಯೋಜನೆಯು ನೀತಿ ಸಂಹಿತೆಯ ಆಧಾರಿತವಾಗಿರ ಬೇಕು, ವಿಶೇಷವಾಗಿ ಕಲಮು 5 ಕ್ಕೆ ಸಂಬಂಧಿಸಿದಂತೆ ಸಾಮರ್ಥ್ಯವನ್ನು ಹೆಚ್ಚಿಸಲು ಅಭಿವೃದ್ಧಿಶೀಲ ರಾಷ್ಟ್ರಗಳು ಅವರ ರಾಷ್ಟ್ರದ ಮೀನುಗಾರಿಕೆಯನ್ನು ಅಭಿವೃದ್ಧಿ ಪಡಿಸುವುದರ ಹಾಗೂ ಅವರ ಕಾನೂನುಬದ್ಧ ಹಕ್ಕು ಮತ್ತು ಅವರ ಅಂತರಾಷ್ಟ್ರೀಯ ಕಾನೂನಿಗೆ ಬದ್ಧವಾಗಿ ತಮ್ಮ ಮೀನುಗಾರಿಕೆ ಹಾಗೂ ಸಾಗರದಾಚೆಗೆ ಮೀನುಗಾರಿಕೆಯಲ್ಲಿ ಭಾಗವಹಿಸ ಬಹುದಾಗಿದೆ.

**ಭಾಗ–III– ತುರ್ತು ಕ್ರಮಗಳು**

**ವಿಭಾಗ–I– ಮೀನುಗಾರಿಕಾ ಸಾಮರ್ಥ್ಯದ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆ.**

**ಮೀನುಗಾರಿಕಾ ಸಾಮರ್ಥ್ಯದ ಮಾಪನ:**

11. ಮೀನುಗಾರಿಕಾ ಸಾಮರ್ಥ್ಯದ ಮಾಪನ ಮತ್ತು ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ರಾಷ್ಟ್ರಗಳು ಸಂಘಟಿತ ಪ್ರಯತ್ನಗಳನ್ನು ಮತ್ತು ಸಂಶೋಧನೆಯನ್ನು ಮಾಪನ ಮತ್ತು

ಮೇಲ್ವಿಚಾರಣೆ ಸಮಸ್ಯೆಗಳ ಮೂಲಭೂತ ವಿಚಾರಗಳನ್ನು ರಾಷ್ಟ್ರೀಯ, ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಉತ್ತಮವಾಗಿ ಅರ್ಥ ಮಾಡಿಕೊಳ್ಳತಕ್ಕದ್ದು.

12. ಆಹಾರ ಮತ್ತು ಕೃಷಿ ಸಂಸ್ಥೆಯು (FAO) ಮೀನುಗಾರಿಕಾ ಸಾಮರ್ಥ್ಯದ ವ್ಯಾಖ್ಯಾನ ಮತ್ತು ಮಾಪನ, ನಂತರದ ತಯಾರಿಕೆ, ದತ್ತಾಂಶಗಳ ಸಂಗ್ರಹ ಮತ್ತು ವಿಶ್ಲೇಷಣೆ ಇದರ ತಾಂತ್ರಿಕ ಸಮಾಲೋಚನೆಯನ್ನು ಆದಷ್ಟು ಬೇಗ ಅಂದರೆ 1999 ರ ಒಳಗಾಗಿ ಜರಗಿಸತಕ್ಕದ್ದು. ಸದ್ರಿ ಸಮಾಲೋಚನೆಯ ಫಲಿತಾಂಶವನ್ನು ನೋಡಿಕೊಂಡು ನಿರ್ಧಿಷ್ಟವಾದ ಮಾರ್ಗದರ್ಶನವನ್ನು ಮೀನುಗಾರಿಕಾ ಸಾಮರ್ಥ್ಯದ ಪೂರ್ವಭಾವಿ ನಿರ್ಧಾರಣೆಯ ಮತ್ತು ಹೆಚ್ಚಿನ ಮೀನುಗಾರಿಕಾ ಸಾಮರ್ಥ್ಯದ ಬಗ್ಗೆ ರಾಷ್ಟ್ರೀಯ, ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ನಡೆಸತಕ್ಕದ್ದು.

**ತುರ್ತಾಗಿ ಮೀನುಗಾರಿಕೆಯ ಮತ್ತು ಮೀನುಗಾರಿಕಾ ನೌಕೆಗಳನ್ನು ಗುರುತಿಸುವುದು ಮತ್ತು ಪರೀಕ್ಷಿಸುವುದು ಇವುಗಳ ಬಗ್ಗೆ ತೆಗೆದುಕೊಳ್ಳ ಬೇಕಾದ ಕ್ರಮಗಳು.**

13. 2000 ದ ಅಂತ್ಯದೊಳಗಾಗಿ ರಾಷ್ಟ್ರ ಮಟ್ಟದಲ್ಲಿ ಮುಖ್ಯವಾದ ಮೀನುಗಾರಿಕೆ ಮತ್ತು ಮೀನುಗಾರಿಕಾ ನೌಕೆಗಳಿಗೆ ಅನ್ವಯಿಸುವಂತೆ ಪ್ರಾಥಮಿಕ ಮಾಹಿತಿಯನ್ನು ಪಡೆಯುವಲ್ಲಿ ಕ್ರಮ ಜರಗಿಸತಕ್ಕದ್ದು ಮತ್ತು ಸದ್ರಿ ಮಾಹಿತಿಯನ್ನು ನಿಯಮಿತವಾಗಿ ಪರಿಷ್ಕರಿಸತಕ್ಕದ್ದು.

14. 2001 ರ ಅಂತ್ಯದ ಒಳಗಾಗಿ ರಾಷ್ಟ್ರೀಯ ಮೀನುಗಾರಿಕೆಯನ್ನು ವ್ಯವಸ್ಥಿತ ರೀತಿಯಲ್ಲಿ ಗುರುತಿಸುವುದನ್ನು ಮತ್ತು ಮೀನುಗಾರಿಕಾ ನೌಕೆಗಳಿಗೆ ತುರ್ತಾಗಿ ಬೇಕಾದ ಕ್ರಮಗಳನ್ನು ಮತ್ತು ನಿಯಮಿತವಾಗಿ ಸದ್ರಿ ವಿಶ್ಲೇಷಣೆಯನ್ನು ಪರಿಷ್ಕರಿಸಿ ಅಳವಡಿಸಿಕೊಳ್ಳತಕ್ಕದ್ದು.

15. ರಾಷ್ಟ್ರಗಳು ಅದೇ ಸಮಯದಲ್ಲಿ ಚೌಕಟ್ಟಿನೊಳಗೆ ಮೀನುಗಾರಿಕಾ ಸಾಮರ್ಥ್ಯದ ಪ್ರಾಥಮಿಕ ಮೌಲ್ಯಮಾಪನವನ್ನು ಪ್ರಾದೇಶಿಕ ಮಟ್ಟದಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಮುಖ್ಯವಾಗಿ ಗಡಿಯಾಚೆಯ, ವ್ಯಾಪಿಸಿಕೊಂಡಿರುವ ಮತ್ತು ಹೆಚ್ಚಾಗಿ ವಲಸೆಹೋಗುವ ಮತ್ತು ಸಾಗರದಾಚೆಗೆ ಮೀನುಗಾರಿಕೆಯನ್ನು ಮಾಡುವ ಪ್ರಾದೇಶಿಕ ಮತ್ತು ಜಾಗತಿಕ ಮೀನುಗಾರಿಕೆಯನ್ನು ಮತ್ತು ಮೀನುಗಾರಿಕಾ ನೌಕೆಗಳಿಗೆ ತುರ್ತಾಗಿ ಬೇಕಾದ ಕ್ರಮಗಳ ಬಗ್ಗೆ ಸಹಕಾರವನ್ನು ನೀಡತಕ್ಕದ್ದು.

**ಮೀನುಗಾರಿಕಾ ನೌಕೆಗಳ ದಾಖಲೆಯನ್ನು ನಿರ್ಮಿಸುವುದು.**

16. ಸೂಕ್ತವಾದ ಮತ್ತು ಹೊಂದಾಣಿಕೆಯ ಗುಣಮಟ್ಟದ ಮೀನುಗಾರಿಕಾ ನೌಕೆಗಳ ದಾಖಲೆಯನ್ನು ನಿರ್ಮಿಸುವಲ್ಲಿ ದೇಶಗಳು ಆಹಾರ ಮತ್ತು ಕೃಷಿ ಸಂಸ್ಥೆಗೆ (FAO) ಬೆಂಬಲ ನೀಡತಕ್ಕದ್ದು.

17. ಮೀನುಗಾರಿಕಾ ನೌಕೆಗಳ ಸೂಕ್ತ ಮತ್ತು ಹೊಂದಾಣಿಕೆಯ ರಾಷ್ಟ್ರೀಯ ದಾಖಲೆಯನ್ನು ದೇಶಗಳು ನಿರ್ಮಿಸತಕ್ಕದ್ದು ಮತ್ತು ಅದರ ಮಾಹಿತಿಯನ್ನು ಪಡೆಯಲು ನಿಯಮಗಳನ್ನು ರಚಿಸತಕ್ಕದ್ದು.

18. ಅಂತರಾಷ್ಟ್ರೀಯ ಸಂರಕ್ಷಣೆ ಮತ್ತು ನಿರ್ವಹಣಾ ಕ್ರಮಗಳನ್ನು ಸಾಗರದಾಚೆಗೆ ನಿರ್ವಹಿಸುವ ಮೀನುಗಾರಿಕಾ ನೌಕೆಗಳು ಮಾಡುವುದಕ್ಕಾಗಿ ಒಪ್ಪಂದಕ್ಕಾಗಿ ಕಾಯುತ್ತಿರುವಾಗ ಅನುಸರಣಾ ವರದಿಯನ್ನು ಪಾಲಿಸತಕ್ಕದ್ದು. (ಅನುಸರಣಾ ಒಪ್ಪಂದ) ಅನುಸರಣಾ ಒಪ್ಪಂದದ ಮಾದರಿಯನ್ನು 2000 ದ ಒಳಗಾಗಿ ಮತ್ತು ಸಾಗಾರದಾಚೆಗೆ ಮೀನುಗಾರಿಕಾ ಕಾರ್ಯಾಚರಣೆ ಮಾಡುತ್ತಿರುವ ನೌಕೆಗಳ ಮಾಹಿತಿಯನ್ನು ಸ್ಥಾಪಿಸುವ ಬಗ್ಗೆ ದೇಶಗಳು ಆಹಾರ ಮತ್ತು ಕೃಷಿ ಸಂಸ್ಥೆಗೆ (FAO) ಬೆಂಬಲ ನೀಡತಕ್ಕದ್ದು.

**ವಿಭಾಗ-II: ಅಂತರಾಷ್ಟ್ರೀಯ ಕ್ರಿಯಾಯೋಜನೆಗಳ ತಯಾರಿಕೆ.**

**ರಾಷ್ಟ್ರೀಯ ಯೋಜನೆಗಳ ಮತ್ತು ನೀತಿಗಳ ಅಭಿವೃದ್ಧಿ**

19. ಮೀನುಗಾರಿಕಾ ಸಾಮರ್ಥ್ಯದ ಬಗ್ಗೆ ದೇಶಗಳು ರಾಷ್ಟ್ರೀಯ ಕ್ರಿಯಾಯೋಜನೆಯನ್ನು ಅಭಿವೃದ್ಧಿ ಪಡಿಸಲು ಮತ್ತು ಕಾರ್ಯಗತಗೊಳಿಸಲು ಮತ್ತು ಮೇಲ್ವಿಚಾರಣೆಯನ್ನು ಮಾಡಲು, ವಿವಿಧ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಗಳ ಪರಿಣಾಮವನ್ನು ಗಮನಿಸತಕ್ಕದ್ದು.

20. ಮೀನುಗಾರಿಕಾ ಸಾಮರ್ಥ್ಯವನ್ನು ವ್ಯವಸ್ಥಿತವಾಗಿ ಮತ್ತು ನಿಖರವಾಗಿ ಮತ್ತು ನಿಯಮಿತವಾಗಿ ಲಭ್ಯವಿರುವ ಮೀನುಗಾರಿಕಾ ಸಂಪನ್ಮೂಲಗಳ ಮತ್ತು ಲಭ್ಯವಿರುವ ಮೀನುಗಾರಿಕಾ ಸಾಮರ್ಥ್ಯದ ಮತ್ತು ಉದ್ದೇಶಗಳ ನಿರ್ವಹಣೆಯ ಅಸಮತೋಲನವನ್ನು ನಿರ್ಣಯಿಸತಕ್ಕದ್ದು.

21. ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯ ಬಗ್ಗೆ ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಗೊಳಿಸಲು, ಅಳವಡಿಸಿಕೊಳ್ಳಲು ಮತ್ತು ಸಾರ್ವಜನಿಕವಾಗಿ ಮಾಡಲು, ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಥನೀಯವಾಗಿ ಉಪಯೋಗಿಸಲು, ಅಗತ್ಯವಿದ್ದಲ್ಲಿ ಮೀನುಗಾರಿಕಾ ಸಾಮರ್ಥ್ಯವನ್ನು ಕಡಿಮೆ ಮಾಡಲು, ಮೀನಿನ ದಾಸ್ತಾನಿನ ಮೌಲ್ಯಮಾಪನ ಮತ್ತು ಅಗತ್ಯವಿರುವ ನಿರ್ಧಿಷ್ಟವಾದ ವಿಷಯಗಳ ಮೇಲೆ ತುರ್ತು ಕ್ರಮಗಳನ್ನು, ಅಲ್ಲದೆ ನಿರ್ವಹಣೆಯನ್ನು ಪರಿಹರಿಸಲು ತುರ್ತು ಕ್ರಮಗಳನ್ನು ಮತ್ತು ಗಮನಾರ್ಹವಾಗಿ ಅತಿಯಾದ ಮೀನುಗಾರಿಕೆಯನ್ನು ಗುರುತಿಸುವುದನ್ನು ದೇಶಗಳು ಅಭಿವೃದ್ಧಿ ಪಡಿಸತಕ್ಕದ್ದು.

22. ಮೀನುಗಾರಿಕಾ ಸಾಮರ್ಥ್ಯ ಕಡಿಮೆಯಾಗಿ ಮೀನುಗಾರರಿಗೆ ತೊಂದರೆಯುಂಟಾದಲ್ಲಿ ಅಂತವರಿಗೆ ಸಾಮಾಜಿಕ-ಆರ್ಥಿಕ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಅಂದರೆ ಪರ್ಯಾಯವಾದ ಉದ್ಯೋಗ ಮತ್ತು ಜೀವನನಿರ್ವಹಣೆಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ರಾಷ್ಟ್ರಿಯ ಯೋಜನೆಯನ್ನು ಅಭಿವೃದ್ಧಿ ಪಡಿಸುವಲ್ಲಿ ಕ್ರಮ ಜರಗಿಸತಕ್ಕದ್ದು.

23. ರಾಷ್ಟ್ರೀಯ ಯೋಜನೆಯಲ್ಲಿ ಮೀನುಗಾರಿಕಾ ಸಾಮರ್ಥ್ಯವನ್ನು ನಿರ್ವಹಣೆ ಮಾಡುವ ಅಗತ್ಯವಿಲ್ಲವೆಂದು ಕಂಡುಬಂದಲ್ಲಿ, ಅಂತಹ ರಾಷ್ಟ್ರಗಳು ಮೀನುಗಾರಿಕಾ ಸಾಮರ್ಥ್ಯದ ವಿಷಯವನ್ನು ಈಗ ನಡೆಯುತ್ತಿರುವ ಮೀನುಗಾರಿಕಾ ವಿಧಾನದಲ್ಲಿ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು.

24. ಮೀನುಗಾರಿಕಾ ಸಾಮರ್ಥ್ಯ ಯೋಜನೆಯನ್ನು ಅನುಷ್ಠಾನಗೊಳಿಸುವ ರಾಷ್ಟ್ರಗಳು ನಿಯಮಿತವಾಗಿ ಅಂದರೆ ಕನಿಷ್ಟ ಪ್ರತೀ 4 ವರ್ಷಗಳಿಗೊಮ್ಮೆಯಾದರೂ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯಲ್ಲಿ, ವೆಚ್ಚ ಪರಿಣಾಮಕಾರಿಯಾದ ತಂತ್ರಗಳನ್ನು ಗುರುತಿಸಲು ವಿಮರ್ಶೆ ಮಾಡತಕ್ಕದ್ದು.

**ಸಹಾಯಧನ ಮತ್ತು ಆರ್ಥಿಕ ಪ್ರೇರಕಗಳು:**

25. ಮೀನುಗಾರಿಕಾ ಸಾಮರ್ಥ್ಯದ ರಾಷ್ಟ್ರೀಯ ಯೋಜನೆಯನ್ನು ಅಭಿವೃದ್ಧಿ ಪಡಿಸುವಾಗ ಎಲ್ಲಾ ಅಂಶಗಳ ಸಂಭವನೀಯ ಪ್ರಭಾವ ಅಂದರೆ ಸಹಾಯಧನವನ್ನು ಕೂಡಾ ಸೇರಿಸಿ, ಹೆಚ್ಚಾದ ಮೀನುಗಾರಿಕೆಯಲ್ಲಿ ಆ ರಾಷ್ಟ್ರದ ಸುಸ್ಥಿರ ನಿರ್ವಹಣೆಯ ಕೊಡುಗೆ, ಅಂಶಗಳ ನಡುವಿನ ವ್ಯತ್ಯಾಸ, ಸಹಾಯಧನವು ಸೇರಿ, ಅದು ಹೆಚ್ಚಾದ ಮೀನುಗಾರಿಕೆಗೆ ಮತ್ತು ಸಮರ್ಥನೀಯವಲ್ಲದ ಮತ್ತು ಧನಾತ್ಮಕ ಪರಿಣಾಮಗಳನ್ನು ಹೆಚ್ಚಿಸುವ ಅಥವಾ ತಟಸ್ಥವಾಗಿರ ಬಹುದು.

26. ರಾಷ್ಟ್ರದ ಎಲ್ಲಾ ಅಂಶಗಳನ್ನು ಕಡಿಮೆ ಮಾಡಲು ಮತ್ತು ಹಂತ ಹಂತವಾಗಿ ತೊಡೆದು ಹಾಕಲು ಅಂದರೆ ಸಹಾಯಧನ ಮತ್ತು ಆರ್ಥಿಕ ಪ್ರೇರಕಗಳನ್ನು ಸೇರಿಸಿ ಹಾಗೂ ಇತರ ಅಂಶಗಳು ನೇರವಾಗಿ ಅಥವಾ ಪರೋಕ್ಷವಾಗಿ ಹೆಚ್ಚಿನ ಮೀನುಗಾರಿಕಾ ಸಾಮರ್ಥ್ಯವನ್ನು ನಿರ್ಮಿಸಿ ಇದರಿಂದ ಸಮುದ್ರದ ಜೀವಂತ ಸಂಪನ್ಮೂಲಗಳ ಸಂರಕ್ಷಣೆಯನ್ನು ತಗ್ಗಿಸುವುದನ್ನು ನಿಲ್ಲಿಸುವಂತಾಗುತ್ತದೆ. ಇದನ್ನು ಮಾಡುವಾಗ ಸಾಂಪ್ರದಾಯಿಕ ಮೀನುಗಾರರ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

**ಪ್ರಾದೇಶಿಕ ಪರಿಗಣನೆಗಳು**

27. ಎಲ್ಲಿ ಸೂಕ್ತವೋ ಅಲ್ಲಿ ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳು ಅಥವಾ ವ್ಯವಸ್ಥೆಗಳ ಮೂಲಕ ಮತ್ತು ಇತರ ಸಹಕಾರ ರೂಪಗಳ ಮೂಲಕ ಮೀನುಗಾರಿಕಾ ಸಾಮರ್ಥ್ಯದ ಪರಿಣಮಕಾರಿ ನಿರ್ವಹಣೆಯನ್ನು ಖಾತರಿ ಪಡಿಸುವ ದೃಷ್ಟಿಯಿಂದ ರಾಷ್ಟ್ರಗಳು ಸಹಕಾರ ನೀಡತಕ್ಕದ್ದು.

28. ರಾಷ್ಟ್ರಗಳು ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಹಯೋಗದೊಂದಿಗೆ ಮತ್ತು ಅಂತರಾಷ್ಟ್ರೀಯ ವ್ಯವಸ್ಥೆಗಳ ಮೂಲಕ ಶ್ರಮಿಸಿ, ಮೀನುಗಾರಿಕಾ ಸಾಮರ್ಥ್ಯದ ಪರಿಣಾಮಕಾರಿ ನಿರ್ವಹಣೆಗೆ ಸಂಶೋಧನೆ, ತರಬೇತಿ ಮತ್ತು ಮಾಹಿತಿಗಳ ಉತ್ಪಾದನೆ ಮತ್ತು ಶಿಕ್ಷಣ ಸಾಮಾಗ್ರಿಗಳನ್ನು ನೀಡುವಲ್ಲಿ ವಿಶೇಷ ಪ್ರಯತ್ನ ಮಾಡಬೇಕು.

**ಅಂತರಾಷ್ಟ್ರೀಯ ಪರಿಗಣನೆಗಳು:**

29. ಮೀನುಗಾರಿಕಾ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ಅಂತರಾಷ್ಟ್ರೀಯ ಒಪ್ಪಂದಗಳಲ್ಲಿ ಭಾಗವಹಿಸುವ ಬಗ್ಗೆ ಮತ್ತು ನಿರ್ಧಿಷ್ಟವಾದ ಅನುಸರಣೆ ಒಪ್ಪಂದ, ವ್ಯಾಪಿಸಿ ಕೊಂಡಿರುವ ಮೀನಿನ ದಾಸ್ತಾನು ಮತ್ತು ಹೆಚ್ಚಾಗಿ ವಲಸೆ ಹೋಗುವ ಮೀನಿನ ಸಂರಕ್ಷಣೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ದಿನಾಂಕ 10 ಡಿಸೆಂಬರ್ 1982 ರಲ್ಲಿ ನಡೆದ ವಿಶ್ವಸಂಸ್ಥೆಯ ಸಮಾವೇಶದಲ್ಲಿ ಮಾಡಿಕೊಂಡ ಸಮುದ್ರದ ಕಾನೂನುಗಳ ನಿಬಂಧನೆಗಳನ್ನು ಅನುಷ್ಟಾನಕ್ಕೆ ತರಲು ರಾಷ್ಟ್ರಗಳು ಒಪ್ಪಂದ ಮಾಡಿಕೊಳ್ಳುವುದು.

30. ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳಿಗೆ ಅವರ ವಿಧಾನಗಳಿಗೆ ಅನುಗುಣವಾಗಿ ಸಹಕಾರ ನೀಡುವಲ್ಲಿ ಮತ್ತು ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವಲ್ಲಿ ರಾಷ್ಟ್ರಗಳು ಬೆಂಬಲ ನೀಡತಕ್ಕದ್ದು.

31. ಸಾಗರದಾಚೆಗೆ ಮೀನುಗಾರಿಕೆ ಮಾಡುತ್ತಿರುವ ನೌಕೆಗಳ ಮೀನುಗಾರಿಕಾ ಸಾಮರ್ಥ್ಯವನ್ನು ನಿರ್ವಹಣೆ ಮಾಡುವಲ್ಲಿ ಮತ್ತು ಇತರ ರಾಷ್ಟ್ರಗಳೊಂದಿಗೆ ಸಾಗಾರದಾಚೆಗಿನ ಮೀನುಗಾರಿಕೆಯಲ್ಲಿ ಹೆಚ್ಚಾಗಿ ಹಿಡಿಯಲಾಗುತ್ತಿರುವ ಮೀನಿನ ದಾಸ್ತಾನು ಕಡಿಮೆಯಾಗುತ್ತಿರುವುದಾಗಿ ಘೋಷಿಸಿದ ಮೀನುಗಾರಿಕಾ ಸಾಮರ್ಥ್ಯವನ್ನು ಕಡಿಮೆ ಮಾಡುವ ಉದ್ದೇಶದಿಂದ ರಾಷ್ಟ್ರಗಳು ಸಹಕರಿಸ ತಕ್ಕದ್ದು.

32. ಸೂಕ್ತವಾದ ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳ ಮೂಲಕ ಮತ್ತು ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಹಯೋಗದೊಂದಿಗೆ ಸಾಗಾರದಾಚೆಗೆ ಮತ್ತು ಕರಾವಳಿ ಪ್ರದೇಶದಲ್ಲಿ ಹಿಡಿಯಲಾಗುವ ಮೀನಿನ ದತ್ತಾಂಶಗಳನ್ನು ಸಂಗ್ರಹಿಸುವಲ್ಲಿ ಸೂಕ್ತ ಸುಧಾರಣೆ ಮಾಡುವುದು.

33. ಮೀನುಗಾರಿಕಾ ನೌಕೆಗಳ ಮತ್ತು ನಿರ್ಧಿಷ್ಟವಾಗಿ ಅದರ ವ್ಯಾಪ್ತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸದೇ ಇರುವ ಮತ್ತು ಆ ನೌಕೆಗಳ ಮೇಲೆ ನಿಯಂತ್ರಣ ಇಲ್ಲದೇ ಇರುವ ಅಂದರೆ ಅವುಗಳು ಅವರದೇ ರೀತಿಯಲ್ಲಿ ಕಾರ್ಯನಿರ್ವಹಿಸಿ ಅಂತರಾಷ್ಟ್ರೀಯ ಕಾನೂನು ಮತ್ತು ಅಂತರಾಷ್ಟ್ರೀಯ ಸಂರಕ್ಷಣೆ ಮತ್ತು ನಿರ್ವಹಣೆಯನ್ನು ಮೀರುವುದು ಮತ್ತು ಹಾಳುಗೆಡಹುವಂತದ್ದನ್ನು ಗುರುತಿಸುವ ಅಗತ್ಯತೆ ಮತ್ತು ಯಾವ ರಾಷ್ಟ್ರವನ್ನು ಧ್ವಜ ರಾಷ್ಟ್ರವೆಂದು ಪರಿಗಣಿಸಲಾಗಿದೆಯೋ ಮತ್ತು ಅವುಗಳು ಅಂತರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ ತಮ್ಮ ಜವಾಬ್ದಾರಿಗಳನ್ನು ಪೂರೈಸುವುದಿಲ್ಲವೋ ಅವುಗಳ ಬಗ್ಗೆ ನಿಗಾ ವಹಿಸತಕ್ಕದ್ದು.

34. ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳ ಅಥವಾ ಅಂತಹ ವ್ಯವಸ್ಥೆಗಳ ಸದಸ್ಯರಾಗಲು ಅಥವಾ ಸಂರಕ್ಷಣೆ ಮತ್ತು ನಿರ್ವಹಣಾ ಕ್ರಮಗಳನ್ನು ಆ ಸಂಸ್ಥೆಗಳ ಮೂಲಕ ಅಥವಾ ವ್ಯವಸ್ಥೆಯ ಮೂಲಕ ತಮ್ಮ ನೌಕೆಗಳಿಗೆ ಅನ್ವಯಮಾಡುವುದಾದಲ್ಲಿ ಅಂತಹ ರಾಷ್ಟ್ರಗಳನ್ನು ಪ್ರೋತ್ಸಾಹಿಸತಕ್ಕದ್ದು.

35. ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಹಕಾರದೊಂದಿಗೆ ಯಾವ ಮೀನುಗಾರಿಕಾ ನೌಕೆಗಳು ಪ್ರಾದೇಶಿಕ ಮೀನುಗಾರಿಕಾ ಸಂಸ್ಥೆಗಳು ಮತ್ತು ಅಂತಹ ವ್ಯವಸ್ಥೆಗಳು ಕಲಮು VI ರ ಅನುಸರಣಾ ಒಪ್ಪಂದದ ಪ್ರಕಾರ ಮೀನುಗಾರಿಕಾ ಚಟುವಟಿಕೆಗಳ ಸಂರಕ್ಷಣಾ ಮತ್ತು ನಿರ್ವಹಣಾ ಕ್ರಮಗಳನ್ನು ಅನುಸರಿಸುವುದಿಲ್ಲವೋ ಅಂತಹ ನೌಕೆಗಳ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವಲ್ಲಿ ರಾಷ್ಟ್ರಗಳು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

36. ಅನುಸರಣಾ ಒಪ್ಪಂದಗಳನ್ನು ನಿರೀಕ್ಷಿಸಿ ಕಲಮು III ರ ಪ್ರಕಾರ ಅನುಸರಣೆ ಒಪ್ಪಂದದಲ್ಲಿರುವ ಅನುವಿನಂತೆ ಅದನ್ನು ಜಾರಿಗೆ ತರುವಲ್ಲಿ ದೇಶಗಳು ಶ್ರಮಿಸಬೇಕು.

37. ಮತ್ತೊಂದು ದೇಶದ ವ್ಯಾಪ್ತಿಯೊಳಗೆ ಸಾಮರ್ಥ್ಯವನ್ನು ವರ್ಗಾಯಿಸುವುದನ್ನು ತುರ್ತು ಒಪ್ಪಿಗೆಯನ್ನು ಪಡೆಯದ ವಿನಃಹ ಮತ್ತು ಆ ದೇಶದ ಔಪಚಾರಿಕ ಅನುಮತಿ ಇಲ್ಲದೇ ಮಾಡದ ಹಾಗೆ ರಾಷ್ಟ್ರಗಳು ಖಚಿತಪಡಿಸಿ ಕೊಳ್ಳತಕ್ಕದ್ದು.

38. ಧ್ವಜ ರಾಷ್ಟ್ರದ ಕರ್ತವ್ಯದಂತೆ ಆ ದೇಶದ ನೌಕೆಗಳು ಸಾಗರದಾಚೆಗಿನ ಪ್ರದೇಶಗಳಲ್ಲಿ ಅವರ ಧ್ವಜವನ್ನು ಹಾರಿಸಿ ಅಂತಹ ವರ್ಗಾವಣೆಗಳನ್ನು ಮಾಡುವುದು ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆಯಂತೆ ಅಸಮಂಜಸವಾಗಿರುತ್ತದೆ. ದೇಶಗಳು ಅಂತಹ ಅನುಮೋದನೆಯನ್ನು ತಿರಸ್ಕರಿಸತಕ್ಕದ್ದು.

## ಭಾಗ-IV: ಪ್ರಮುಖ ಅಂತರಾಷ್ಟ್ರೀಯ ಮೀನುಗಾರಿಕೆಗೆ ಅಗತ್ಯವಿರುವ ತುರ್ತು ಕ್ರಮಗಳ ಬಗ್ಗೆ ಶೀಘ್ರ ಕ್ರಮಗಳು

39. ಅಂತರಾಷ್ಟ್ರೀಯ ಮೀನುಗಾರಿಕೆಯನ್ನು ನಿರ್ವಹಿಸುವಲ್ಲಿ ಎಲ್ಲಿ ತುರ್ತು ಗಮನ ಅಗತ್ಯವಿದೆಯೋ ಅಲ್ಲಿ ಪ್ರಮುಖವಾಗಿ ಗಡಿಯಾಚೆಯ, ವ್ಯಾಪಿಸಿಕೊಂಡಿರುವ ಮತ್ತು ಹೆಚ್ಚಾಗಿ ವಲಸೆಹೋಗುವ ಮತ್ತು ಸಾಗರದಾಚೆಗಿನ ದಾಸ್ತಾನುಗಳನ್ನು ಎಲ್ಲಿ ಗಮನಾರ್ಹವಾಗಿ ಅತಿಯಾದ ಮೀನುಗಾರಿಕೆಯನ್ನು ಮಾಡಿ ಹಿಡಿಯಲಾಗುತ್ತಿದೆಯೋ ಅಲ್ಲಿ ಅವುಗಳ ಬಗ್ಗೆ ಗಮನವನ್ನು ನೀಡತಕ್ಕದ್ದು.

40. ಅದರ ಸಾಮರ್ಥ್ಯಗಳ ಚೌಕಟ್ಟಿನೊಳಗೆ ರಾಷ್ಟ್ರಗಳು ವಯ್ಯಕ್ತಿಕವಾಗಿ, ದ್ವಿಪಕ್ಷೀಯವಾಗಿ ಮತ್ತು ಬಹುಪಕ್ಷೀಯವಾಗಿ ಇದರಲ್ಲಿ ಯಾವುದು ಅನ್ವಯವಾಗುತ್ತದೆಯೋ ಅದರಂತೆ ಇತರ ಸಂಬಂಧಪಟ್ಟ ಅಂತರಾಷ್ಟ್ರೀಯ ಕ್ರಿಯಾ ಯೋಜನೆಯ ನಿಬಂಧನೆಗಳ ಜೊತೆಗೆ ಹೆಚ್ಚಾಗಿ ಹಿಡಿದ ಮೀನುಗಳ ದಾಸ್ತಾನನ್ನು ಸಮರ್ಥನೀಯ[9] ಮಟ್ಟಕ್ಕೆ ಏರಿಸುವ ಸಲುವಾಗಿ, ಆ ಸಂಪನ್ಮೂಲಗಳ ಹಿಡಿಯುವಿಕೆಯ ಬಗ್ಗೆ ಕೋರಿರುವ ನೌಕೆಯ ಸಾಮರ್ಥ್ಯವನ್ನು ಗಣನೀಯವಾಗಿ ಕಡಿಮೆ ಮಾಡತಕ್ಕದ್ದು.

I. ಆರ್ಥಿಕ ಪ್ರಾಮುಖ್ಯತೆಯನ್ನು ಪಡೆದ ನೌಕೆಗಳು ಹೆಚ್ಚಾಗಿ ಮೀನುಗಾರಿಕೆ ಮಾಡಿದ ದಾಸ್ತಾನುಗಳನ್ನು ಮತ್ತು ಅದರ ಮಿತಿಯನ್ನು ಸಮರ್ಥನೀಯ ಮಟ್ಟಕ್ಕೆ ಮತ್ತು ಆರ್ಥಿಕ ಮಟ್ಟಕ್ಕೆ ಏರಿಸುವ ಸಲುವಾಗಿ ಕಡಿಮೆ ಮಾಡುವ ಅಗತ್ಯವಿದೆ.

II. ಮೀನಿನ ದಾಸ್ತಾನಿನ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಾದ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಂಡಿರುವ ಅಥವಾ ಹೆಚ್ಚಾಗಿ ಹಿಡಿದ ಮೀನುಗಾರಿಕೆಯನ್ನು ವರ್ಗಾಯಿಸುವುದನ್ನು ನಿಯಂತ್ರಣ ಮಾಡಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

---

[9] ಉಪಯೋಗಿಸ ಬೇಕಾದ ತಗ್ಗಿಸುವಿಕೆಯ ಕ್ರಮಗಳು ಮೀನುಗಾರಿಕೆಯಿಂದ ಮೀನುಗಾರಿಕೆಗೆ ಬೇರೆಯಾಗಿರುತ್ತದೆ. ಉದಾಹರಣೆಗೆ: 20 ರಿಂದ 30% ತಗ್ಗಿಸುವಿಕೆಯನ್ನು ದೊಡ್ಡ ಪ್ರಮಾಣದ ಟೂನಾ ಗಾಳ ಮೀನುಗಾರಿಕೆ ನೌಕೆಗೆ. (ಮೀನುಗಾರಿಕಾ ಸಾಮರ್ಥ್ಯದ ಮೇಲೆ ದಿನಾಂಕ 18 ಏಪ್ರಿಲ್ 1998 ರಲ್ಲಿ ಜರಗಿದ ಆಹಾರ ಮತ್ತು ಕೃಷಿ ಸಂಸ್ಥೆಯ ತಾಂತ್ರಿಕ ಸಮಿತಿ ಸಭೆ, ಲಾ ಜೊಲ್ಲಾ, ಯು.ಎಸ್.ಎ. ಆಹಾರ ಮತ್ತು ಕೃಷಿ ಸಂಸ್ಥೆ ಇದರ ವರದಿ ಸಂಖ್ಯೆ. 586)

## ಭಾಗ-IV-ಅನುಷ್ಠಾನವನ್ನು ಮಾಡುವ ಕ್ರಮಗಳನ್ನು ಪ್ರೋತ್ಸಾಹಿಸುವುದು.

41. ರಾಷ್ಟ್ರಗಳು ರಾಷ್ಟ್ರೀಯವಾಗಿ, ಪ್ರಾದೇಶಿಕವಾಗಿ ಮತ್ತು ಜಾಗತಿಕ ಮಟ್ಟದಲ್ಲಿ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯ ಅಗತ್ಯದ ಬಗ್ಗೆ ಜಾಗೃತಿಯನ್ನು ಹೆಚ್ಚಿಸಲು ಮತ್ತು ಅದರ ವೆಚ್ಚ ಹಾಗೂ ಮೀನುಗಾರಿಕಾ ಸಾಮರ್ಥ್ಯದ ಹೊಂದಾಣಿಕೆಯಿಂದ ಆಗುವ ಲಾಭವನ್ನು ತಿಳಿಸುವ ಬಗ್ಗೆ ಮಾಹಿತಿ ಕಾರ್ಯಕ್ರಮಗಳನ್ನು ಅಭಿವೃದ್ಧಿ ಪಡಿಸತಕ್ಕದ್ದು.

## ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರ

42. ರಾಷ್ಟ್ರಗಳು ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯ ವಿಷಯದಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಮಾಹಿತಿಗಳನ್ನು ವಿನಿಮಯ ಮಾಡುವಲ್ಲಿ ಮತ್ತು ಅದರ ಲಭ್ಯತೆಯನ್ನು ಜಗತ್ತಿನಾದ್ಯಂತ ಅಸ್ತಿತ್ವದಲ್ಲಿರುವ ಪ್ರಾದೇಶಿಕ ಮತ್ತು ಜಾಗತಿಕ ವೇದಿಕೆಯಲ್ಲಿ ಲಭ್ಯವಾಗುವಂತೆ ಸಹಕಾರ ನೀಡತಕ್ಕದ್ದು.

43. ರಾಷ್ಟ್ರಗಳು ತರಬೇತಿ ಮತ್ತು ಸಾಂಸ್ಥಿಕ ಸಂಸ್ಥೆಗಳನ್ನು ಬಲಪಡಿಸಲು ಸಹಕಾರ ನೀಡತಕ್ಕದ್ದು ಮತ್ತು ಆರ್ಥಿಕ, ತಾಂತ್ರಿಕ ಮತ್ತು ಇತರ ಸಹಾಯವನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯನ್ನು ಮಾಡುವ ವಿಷಯದ ಸಲುವಾಗಿ ನೀಡತಕ್ಕದ್ದು.

## ವರದಿ

44. ರಾಷ್ಟ್ರಗಳು ಆಹಾರ ಮತ್ತು ಕೃಷಿ ಸಂಸ್ಥೆಗೆ (FAO) ಜವಾಬ್ದಾರಿಯುತ ಮೀನುಗಾರಿಕಾ ನೀತಿ ಸಂಹಿತೆಯ ಬಗ್ಗೆ ಸಲ್ಲಿಸುವ ಅರ್ಧ-ವಾರ್ಷಿಕ ವರದಿಯಲ್ಲಿ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆ ಯೋಜನೆಯ ಮೌಲ್ಯಮಾಪನದ ವರದಿ, ಅಭಿವೃದ್ಧಿ ಮತ್ತು ಅನುಷ್ಠಾನದ ವರದಿಯನ್ನು ಒಂದು ಭಾಗವಾಗಿ ಸಲ್ಲಿಸತಕ್ಕದ್ದು.

## ಆಹಾರ ಮತ್ತು ಕೃಷಿ ಸಂಸ್ಥೆ (FAO) ಇದರ ಪಾತ್ರ

45. ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಮ್ಮೇಳನದಲ್ಲಿ ನಿರ್ದೇಶಿಸಿದಂತೆ ಎಲ್ಲಾ ಸಂಬಂಧಿತ ಮಾಹಿತಿಗಳನ್ನು ಮತ್ತು ದತ್ತಾಂಶಗಳನ್ನು ಹೆಚ್ಚಿನ ವಿಶ್ಲೇಷಣೆಗೆ ಅದರಲ್ಲೂ ಹೆಚ್ಚಿನ ಸಾಮರ್ಥ್ಯಕ್ಕೆ ಕಾರಣವಾದ ಅಂಶಗಳನ್ನು ಗುರುತಿಸುವ ಬಗ್ಗೆ ಅಂದರೆ ಪ್ರವೇಶದ ಮಾಹಿತಿ ಕೊರತೆ ಮತ್ತು ಇಳುವರಿ ನಿಯಂತ್ರಣ, ಸಮರ್ಥನೀಯವಲ್ಲದ ಮೀನುಗಾರಿಕಾ ನಿರ್ವಹಣಾ ವಿಧಾನಗಳು ಮತ್ತು ಸಹಾಯಧನ ಇವುಗಳು ಹೆಚ್ಚಿನ ಸಾಮರ್ಥ್ಯದ ಮೇಲೆ ಕೊಡುಗೆಯನ್ನು ನೀಡುತ್ತದೆ ಎಂಬುದನ್ನು ಗಮನಿಸತಕ್ಕದ್ದು.

46. ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಸಮ್ಮೇಳನದಲ್ಲಿ ನಿರ್ದೇಶಿಸಿದಂತೆ ಮತ್ತು ತನ್ನ ಸಾಮಾನ್ಯ ಕಾರ್ಯಕ್ರಮದ ಚಟುವಟಿಕೆಗಳಡಿ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆ ಬಗ್ಗೆ ರಾಷ್ಟ್ರೀಯ ಯೋಜನೆಯನ್ನು ಅನುಷ್ಠಾನಗೊಳಿಸುವರೆ ಎಲ್ಲಾ ರಾಷ್ಟ್ರಗಳಿಗೆ ಸಹಾಯ ಮಾಡುತ್ತದೆ.

47. ಆಹಾರ ಮತ್ತು ಕೃಷಿ ಸಂಸ್ಥೆಯ FAO ಸಮ್ಮೇಳನದಲ್ಲಿ ನಿರ್ದೇಶಿಸಿದಂತೆ ನಿರ್ದಿಷ್ಟವಾಗಿ ಮೀನುಗಾರಿಕಾ ಸಾಮರ್ಥ್ಯದ ನಿರ್ವಹಣೆಯ ಬಗ್ಗೆ ರಾಷ್ಟ್ರೀಯ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ರಾಷ್ಟ್ರದ ಆಂತರಿಕ ತಾಂತ್ರಿಕ ಸಹಾಯದ ಯೋಜನೆಗಳ ಮೂಲಕ ತನ್ನ ಸಾಮಾನ್ಯ ಕಾರ್ಯಕ್ರಮಗಳ ನಿಧಿಯಿಂದ ಮತ್ತು ಸಂಸ್ಥೆಗೆ ಇಂತಹ ಉದ್ದೇಶಗಳಿಗಾಗಿ ಒದಗಿಸಿರುವ ಹೆಚ್ಚುವರಿ ಅನುದಾನದ ನಿಧಿಯಿಂದ ಸಹಾಯ ಮಾಡುತ್ತದೆ.

48. ಆಹಾರ ಮತ್ತು ಕೃಷಿ ಸಂಸ್ಥೆಯು (FAO) ಅಂತರಾಷ್ಟ್ರೀಯ ಕ್ರಿಯಾಯೋಜನೆಯ ಅನುಷ್ಠಾನದ ಪ್ರಗತಿ ಬಗ್ಗೆ COFI ಮೂಲಕ ಅರ್ಧ–ವಾರ್ಷಿಕ ವರದಿಯನ್ನು ಪ್ರಕಟಿಸುವುದು.

ಅಂತರಾಷ್ಟ್ರೀಯ ಕ್ರಿಯಾ ಯೋಜನೆಗಳು ಎಲ್ಲಾ ರಾಷ್ಟ್ರಗಳಿಗೆ ಅನ್ವಯಾಗುವ ಸ್ವಯಂ ಪ್ರೇರಿತ ಸಾಧನಗಳಾಗಿವೆ, ಪ್ರತೀ ಅಂತರಾಷ್ಟ್ರೀಯ ಕ್ರಿಯಾ ಯೋಜನೆಯ ಪಠ್ಯವು ಅನುಷ್ಠಾನ ಮಾಡುವ ರಾಷ್ಟ್ರಗಳು ನಡೆಸಬೇಕಾದ ಚಟುವಟಿಕೆಗಳು, ಈ ಸಮಸ್ಯೆಗಳು ಇವೆಯೋ, ರಾಷ್ಟ್ರೀಯ ಯೋಜನೆಗಳನ್ನು ಅಳವಡಿಸಲು ಬೇಕಾದ ವಿಧಾನಗಳು, ಮತ್ತು ರಾಷ್ಟ್ರೀಯ ವಿಶ್ಲೇಷಣೆಯ ಮತ್ತು ವರದಿ ಮಾಡುವ ಅವಶ್ಯಕತೆಗಳು. ಪ್ರತಿಯೊಂದು ಕ್ರಿಯಾ ಯೋಜನೆಯ ಅನುಷ್ಠಾನದ ಬಗ್ಗೆ ತೆಗೆದು ಕೊಳ್ಳಬೇಕಾದ ನಿಗದಿತ ಕ್ರಮಗಳನ್ನು ಕೂಡಾ ನೀಡಲಾಗಿದೆ.

*Translated and Printed by the Bay of Bengal Programme*
*Inter-Governmental Organisation*
*March 2016*